G R. S 58]

Previous references.

Mal in 58-09 (748)

1912-13

(Mund)

File No. 184-12

Serial Nos 243

Later references

GENERAL AND REVENUE SECRETARIAT.

Serial Nos 243

Part B for April 13

SUBJECT

Rules for the Conduct of business at the municipal council meetings in Regulation Municipalities

(2) From Dy Comr Bangalore Dt No S 505 dt 31-4-13 submits copies of resolns of the Closepet and Channapatna municipalities

(3) Lr No 8559 dt 24-4-13 Approves the proposals of the Closepet-Channapatna town Mund Councils

GVRao 20/5/13

GPS—5,000—22-10-12

(J R.S 11] 1912-13

GENERAL AND REVENUE SECRETARIAT.

(Mis.)

NOTES

File No 186-12

FILE HEADING

Rules for the Conduct of Business at the Municipal Council's Meetings in Regulated Municipalities

From

The Dy. Comr., Bangalore Distt.

No. F 505 Dated 8. 4 13 Received 5th 4 1913

Diary No. 6035	Enclos 2 Spare Copies —	Serial No 2

BRIEF ABSTRACT OF LETTER

Submits Copies of resolutions of the Closepet and Channapatna Municipal Councils deciding to adopt the Rules in force in the City Municipalities of Bangalore and Mysore regulating the Conduct of business and proceedings at the Municipal Council's meetings, with such slight alterations as to the time and date of the meetings.

NOTES AND ORDERS

Draft notifying the Municipal Councils' decisions is submitted. Two sets of Rules incorporating therein the proposals made by the Municipal Councils are placed in the file for reference

2) This is not a Council matter, as the rules are

NOTES—First Sheet

GPB—30,000—12-6-11

6.35

2

(F. R. S. 12)

General and Revenue Secretariat | File No. 1864 of 1912

Serial No	
	are not measures of legislation and do not involve fresh taxation.
	Draft reply to the offer
	2nd Councillor
	Draft approved by 2nd Councillor
4	
5	G.O. No. 8559 Dt. 24.4.913 Appointment of the Inspectors of the Circles and Chennapatna town Municipal Councils.

NOTE—Comin. sheet.

GPB—61,000—17-6-12.

603 Office of the Deputy Commissioner
Bangalore District

Dated, Bangalore 3rd/4 April 1913

10 APR 13

To
B. J. Kuppuswami Naik, Esquire B.A
2 Deputy Commissioner
Bangalore District

H. R. Srinivasiengar, Esquire, M.A.
Offg Secretary to the Government of Mysore
General and Revenue Departments
Bangalore

Sir,

In continuation of this office letter No 207 dated 10th April 1910, I have the honor to submit herewith copies of resolutions passed by the Municipal Councils of Channapatna and Closepet, at their meetings held on 30th January and 10th February 1913, respectively, wherein they have recorded that they agree to adopt the rules that are now observed in the Municipalities of Bangalore and Mysore cities, for conduct of business at their meetings.

I have the honor to be,
Sir,
Your most obedient Servant

Deputy Commissioner
Bangalore Dt

10-2-13.

Ex-officio members.

Ex-officio member

Senior Public works officer

Non-official members.

Non-officials members.

(Vice President)

(Vice President)

(Sd) C. S. Krishnaswamy Iyengar

"True Extract"

Secretary.

Vice President

Executive 1824-12/42

1913

President—

Present—

Vice

Members

1.
2.
3.
4.
5.
6.
7.
8.
9.

//

Vice President—

City of the Chamarajpet Municipal Council

ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗುಗಳಲ್ಲಿ ನಡೆಸಬೇಕಾದ ಕೆಲಸಗಳನ್ನು ಮತ್ತು ನಡೆವ ವಿಧಿಗಳನ್ನು ಕ್ರಮಪಡಿಸುವಕ್ಕೆ ಬಗ್ಯೆ ವಿಧಿಸೋಣಾದ ನಿಬಂಧನೆಗಳು.

ಮೀಟಿಂಗ್ ಮಾಡಬೇಕ್ಕ ಸ್ಥಳ

ಫಲಾನೆ ಸ್ಥಳದಲ್ಲಿ ಮೀಟಿಂಗ್ ಸೇರಂಬೇಕೆಂದು ಕಾರಣಗಳನ್ನು ನಮೂದಿಸಿ ನೋಟೀಸು ಕೊಟ್ಟು ವಿನಾ ಇತರ ಸಂದರ್ಭಗಳಲ್ಲೆಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳ ಮೀಟಿಂಗುಗಳು ಮ್ಯುನಿಸಿಪಲ್ ಆಫೀಸಿನಲ್ಲಿಯೇ ನಡೆಯಬೇಕು ಪ್ರತಿ ತಿಂಗಳ ಮೊದಲನೆಯ ವಾರದ ದಿವಸ ಮಧ್ಯಾಹ್ನ 4 ಘಂಟೆ ಸಮಯದಲ್ಲಿ ಅಥವಾ ಪ್ರೆಸಿಡೆಂಟರಿಗೆ ಸೂಕ್ತ ಕಾಣುವ ಇತರ ದಿವಸ ಮತ್ತು ಕಾಲದಲ್ಲಿ ಸಾಮಾನ್ಯವಾಗಿ ಮೀಟಿಂಗುಗಳನ್ನು ನಡೆಸತಕ್ಕದ್ದು

ಮೀಟಿಂಗ್ ಯಾ ಸಭೆ ನೇರತಕ್ಕ ಬಗ್ಯೆ ನಿಷ್ಕರ್ಷೆಯಾದ ಸಮಯದಲ್ಲಿ ಕಾರ್ಯನಿರ್ವಾಹದ ಬಗ್ಯೆ ಕನಿಷ್ಠ ಪಕ್ಷ ಎಷ್ಟು ಜನ ಕೌನ್ಸಿಲರುಗಳು ಇರಬೇಕೆಂದು ಕ್ಲುಪ್ತವಾಗಿರುತ್ತದೆಯೋ ಅಷ್ಟು ಜನ ಹಾಜರಿದ್ದ ಪಕ್ಷದಲ್ಲಿ ಮೀಟಿಂಗು ನಡೆಸಬೇಕು

2 (a) ಕೌನ್ಸಿಲರುಗಳು ಮೀಟಿಂಗು ಯಾ ಸಭೆಯು ಬಗ್ಯೆ ಸೇರಬೇಕೆಂದು ನಿಷ್ಕರ್ಷೆಯಾದ ಸಮಯದಲ್ಲಿ, ಕಾರ್ಯನಿರ್ವಾಹದ ಬಗ್ಯೆ ಕನಿಷ್ಠ ಪಕ್ಷ ಎಷ್ಟು ಜನ ಕೌನ್ಸಿಲರುಗಳು ಹಾಜರಿರಬೇಕೆಂದು ಕ್ಲುಪ್ತವಾಗಿರುತ್ತದೆಯೋ ಅಷ್ಟು ಜನ ಹಾಜರಿದ್ದ ಪಕ್ಷದಲ್ಲಿ, ಮೀಟಿಂಗಿಗೆ ಸಂಬಂಧಪಟ್ಟ ಕೆಲಸವನ್ನು ಕೂಡಲೆ ಪ್ರಾರಂಭಿಸತಕ್ಕದ್ದು ಪ್ರೆಸಿಡೆಂಟರವರು, ವೈಸ್ ಪ್ರೆಸಿಡೆಂಟರವರು ಈ ಉಭಯತ್ರರು ಗೈರ್ ಹಾಜರಾಗಿದ್ದ ಪಕ್ಷದಲ್ಲಿ, 26 (5) ನೆ ಪ್ರಕರಣದ ಮೇರೆಗೆ ಕೌನ್ಸಿಲರುಗಳು ತಮ್ಮಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಕೂಡಲೇ ಚುನಾಯಿಸಬೇಕು. ಈ ರೀತಿ ಸಭಾಧ್ಯಕ್ಷರನ್ನು ಕೌನ್ಸಿಲರುಗಳು ಚುನಾಯಿಸಿದನಂತರ ಪ್ರೆಸಿಡೆಂಟರಾಗಲಿ ವೈಸ್ ಪ್ರೆಸಿಡೆಂಟರಾಗಲಿ ಹಾಜರಾವಣ್ಣಿ, ಹಾಗೆ ಚುನಾಯಿಸಲ್ಪಟ್ಟ ಕೌನ್ಸಿಲರು ಸಭಾಧ್ಯಕ್ಷರ ಸ್ಥಾನವನ್ನು ಬಿಟ್ಟುಕೊಡತಕ್ಕದ್ದು ಅನಂತರ ಪ್ರೆಸಿಡೆಂಟರಾಗಲಿ ಅಥವಾ ವೈಸ್ ಪ್ರೆಸಿಡೆಂಟರಾಗಲಿ ಸಭಾಧ್ಯಕ್ಷರಾಗತಕ್ಕದ್ದು

ಮೀಟಿಂಗ್ ನೇರತಕ್ಕ ಬಗ್ಯೆ ನಿಷ್ಕರ್ಷೆಯಾದ ಸಮಯದಲ್ಲಿ, ಕನಿಷ್ಠ ಸಂಖ್ಯೆಯ ಕೌನ್ಸಿಲರುಗಳು ಹಾಜರಿಲ್ಲದೆ ಹೋದರೆ

(b) ಮೀಟಿಂಗ್ ಯಾ ಸಭೆ ನೇರತಕ್ಕ ಬಗ್ಯೆ ಗೊತ್ತಾದ ಸಮಯದಲ್ಲಿ ಕಾರ್ಯನಿರ್ವಾಹದ ಬಗ್ಯೆ ಕನಿಷ್ಠ ಪಕ್ಷ ಗೊತ್ತಾದಷ್ಟು ಜನ ಕೌನ್ಸಿಲರುಗಳು ಬಾರದೆ ಇದ್ದ ಪಕ್ಷದಲ್ಲಿ, ಸಭಾಧ್ಯಕ್ಷರಾದವರು ಸದರಿ ಸಭೆಯನ್ನು ಅಚ್ಚರ್ಡ ಮಾಡುವದಕ್ಕೆ ಮುಂಚೆ, 30 ನಿಮಿಷ ಕಾಲ ನಿರೀಕ್ಷಿಸಿ, ಮೀಟಿಂಗ್ ಸೇರುವದಕ್ಕೆ ಗೊತ್ತಾದ ಕಾಲದ ಆಗಾಯಿತು 30 ನಿಮಿಷದವರೆಗೂ ಕಾರ್ಯನಿರ್ವಾಹದ ಬಗ್ಯೆ ಬೇಕಾದಷ್ಟು ಜನ ಕೌನ್ಸಿಲರುಗಳು ಬಾರದೆ ಇದ್ದರೆ ಸದರಿ ಮೀಟಿಂಗ್ ಯಾ ಸಭೆಯನ್ನು ಮುಂದಿನ ವಾರದ ಅದೇ ದಿನ, ಅದೇ ಕಾಲ ಮತ್ತು ಅದೇ ಸ್ಥಳದಲ್ಲಿ ನಡೆಸಲು ಅಚ್ಚರ್ಡ ಮಾಡತಕ್ಕದ್ದು

ಕಾರ್ಯ ಉಪಕ್ರಮವಾದ ನಂತರ ಕ್ಲುಪ್ತಸಂಖ್ಯೆಯ ಕೌನ್ಸಿಲರುಗಳು ಇಲ್ಲದೆ ಇದ್ದರೆ

(c) ಕಾರ್ಯ ಉಪಕ್ರಮವಾದ ಮೇಲೆ ಸಭಾಕಾರ್ಯನಿರ್ವಾಹಕ್ಕೆ ಕ್ಲುಪ್ತವಾದ ಸಂಖ್ಯೆಯ ಕೌನ್ಸಿಲರುಗಳು ಹಾಜರಿಲ್ಲವೆಂದು ಸಭಾಧ್ಯಕ್ಷರಿಗೆ ಕಂಡು ಬಂದರೂ, ಅಥವಾ ಅಂಥಾ ಸಂಗತಿಯನ್ನು ಸಭಾಧ್ಯಕ್ಷರ ತಿಳಿವಳಿಕೆಗೆ ಯಾವ ಕೌನ್ಸಿಲರಾದರೂ ತಂದರೂ ತಕ್ಷಣವೇ ಸಭಾಧ್ಯಕ್ಷರು ನಡೆಸುತ್ತಿದ್ದ ಕೆಲಸವನ್ನು ನಿಲ್ಲಿಸಿ, ಹಾಜರಿರುವ ಕೌನ್ಸಿಲರುಗಳನ್ನು ಎಣಿಸತಕ್ಕದ್ದು, ಮತ್ತು ಹಾಗೆ ಎಣಿಸಲ್ಪಟ್ಟ ಸಂಖ್ಯೆಯು ಕಾರ್ಯನಿರ್ವಾಹ ಬಗ್ಯೆ

ಗೊತ್ತಾದ ಸಂಖ್ಯೆಗಿಂತಲೂ ಕಮ್ಮಿಯಾಗಿದ್ದಲ್ಲಿ, ಸದರಿ ಸಭಾಧ್ಯಕ್ಷರು ಮಿತಿಯಂಗಸ್ಸನ್ನು ಅಜ್ಜರ್ಗ ಮಾಡಬಹುದು

ಮಿನಿಟ್ ಯಾ ಜಾಬ್ತಿಸಲ್ಪಟ್ಟ ವಿಷಯಗಳ ಗೊಡ್ಡಾರೆಯು ತಿದ್ದುಪಾಟು

3 ಹಾಜರಿರುವ ಯಾವ ಕೌನ್ಸಿಲರಾದರೂ, ಜಾಬ್ತಿಸಲ್ಪಟ್ಟ ವಿಷಯಗಳನ್ನು ತಪ್ಪಾಗಿ ಬರೆದುಕೊಂಡಿರುತ್ತೆಂದಾಗಲಿ ಅಥವಾ ಸಂಪೂರ್ಣವಾಗಿ ಬರದುಕೊಂಡು ಇರುವುದಿಲ್ಲವೆಂದಾಗಲಿ ಹೇಳಿದರೆ, ಸಭಾಧ್ಯಕ್ಷರು ಹಾಜರಿರುವ ಮೆಂಬರುಗಳ ಅಭಿಪ್ರಾಯವನ್ನು ತಿಳಿದುಕೊಂಡು ತಮಗೆ ಸರಿಯೆಂದು ತೋರುವಂಥಾ ಬದಲಾವಣೆಗಳನ್ನು ಮಾಡಬಹುದು ಹಾಗೆ ತಿದ್ದುಪಾಟುವಾದ ಮಿನಿಟ್ ಯಾ ಸಂಗ್ರಹವನ್ನು ಮೆಂಬರ್ಕಾರ್ಯದರ್ಶಿ, ಅದಕ್ಕೆ ಸಭಾಧ್ಯಕ್ಷರು ರುಜು ಹಾಕಬೇಕು.

ಜಾಬ್ತಿ ನಡೆಸುವಲ್ಲಿ ಅನುಸರಿಸಬೇಕಾದ ಕ್ರಮ

4 ಮಾತಾಡಬೇಕೆಂದು ಅಪೇಕ್ಷಿಸುವ ಕೌನ್ಸಿಲರು ತಮ್ಮ ಸ್ಥಾನದಲ್ಲಿ ಎದ್ದು ನಿಂತುಕೊಳ್ಳಬೇಕು ಹಾಗೆ ಯಾವ ಕೌನ್ಸಿಲರು ಮೊದಲು ಎದ್ದು ನಿಂತುಕೊಳ್ಳುವರೋ ಅವರೇ ಮೊದಲು ಮಾತಾಡಬೇಕು ಈ ವಿಷಯದಲ್ಲಿ ಏನಾದರೂ ಸಂದೇಹ ಬಂದರೆ, ಸಭಾಧ್ಯಕ್ಷರು ಫಲಾನಿಯವರೇ ಮೊದಲು ಮಾತಾಡತಕ್ಕದ್ದೆಂಬುದನ್ನು ನಿರ್ಣಯಿಸಬೇಕು. ಯಾವ ಕೌನ್ಸಿಲರಾದರೂ ಮಾತಾಡುತ್ತಿದ್ದರೆ, ಅದನ್ನು ಯಾರು ಆಕ್ಷೇಪಿಸಿಕೂಡದು , ಆದರೆ ಸಭಾಧ್ಯಕ್ಷರು ಕ್ರಮ ತಪ್ಪಿ ಮಾತನಾಡಕೂಡದೆಂದು ಹೇಳಬಹುದು, ಮತ್ತು ಯಾರಾದರೂ ಒಬ್ಬ ಕೌನ್ಸಿಲರು ಕ್ರಮ ತಪ್ಪಿ ಮಾತಾಡಿದರೆ ಅವರನ್ನು ಕ್ರಮ ಪ್ರಕಾರ ಮಾತನಾಡುವಂತೆ ಮಾಡಬೇಕೆಂದಾಗಲಿ ಅಥವಾ ಸಭಾಕಾರ್ಯನಿರ್ವಹಣೆಗೆ ಬೇಕಾದಷ್ಟು ಇನ್ನ ಕೌನ್ಸಿಲರುಗಳು ಇಲ್ಲವೆಂತಲಾಗಲಿ ಇತರ ಕೌನ್ಸಿಲರುಗಳು ತಿಳಿಸಬಹುದು

4A. ಮಿಟಿಂಗಿಗೆ ಸಂಬಂಧಪಟ್ಟ ಕಾರ್ಯಗಳ ವಿಷಯದಲ್ಲಿ ಒಬ್ಬ ಕೌನ್ಸಿಲರು ಮತ್ತೊಬ್ಬ ಕೌನ್ಸಿಲರನ್ನು ಪ್ರಶ್ನೆ ಮಾಡಬೇಕಾಗಿ ಬಂದರೆ ಆಂಥಾ ಪ್ರಶ್ನೆಯನ್ನು ಸಭಾಧ್ಯಕ್ಷರ ಮುಖಾಂತರ ಕೇಳಬೇಕು

ಕ್ರಮ

5 ಸಭಾಧ್ಯಕ್ಷರು ಸಭೆಯು ಕ್ರಮಾತಿಕ್ರಮಣವಿಲ್ಲದಂತೆ ನೋಡಿಕೊಳ್ಳಬೇಕು ಮತ್ತು ಇಂತಿಂಥಾ ಸಂದರ್ಭದಲ್ಲಿ ಇಂತಿಂಥಾ ಕ್ರಮವನ್ನೇ ಅನುಸರಿಸಬೇಕೆಂಬುವುದನ್ನು ಅವರು ಕೂಡಲೆ ನಿರ್ಧರಿಸಬೇಕು ಅದರ ಮೇಲೆ ಯಾವ ಜಾಬ್ತಿಯನ್ನು ಮಾಡುವುದಕ್ಕೂ ಅವಕಾಶಕೊಡಕೂಡದು. ಆದರೆ ಹಾಜರಿರುವ ಕೌನ್ಸಿಲರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳತಕ್ಕದ್ದು ಅವಶ್ಯಕವೆಂದು ಸಭಾಧ್ಯಕ್ಷರಿಗೆ ತೋರಿದರೆ ಅಂಥಾ ಸಂದರ್ಭದಲ್ಲಿ ಮಾತ್ರ ಜಾಬ್ತಿಗೆ ಅವಕಾಶ ಕೊಡಬಹುದಾಗಿರುತ್ತೆ. ಕ್ರಮವಿಂಥಾದ್ದೆಂಬ ಅಂಶದಲ್ಲಿ ಸಭಾಧ್ಯಕ್ಷರು ಮಾಡಿರುವ ತೀರ್ಮಾನದಂತೆ ನಡೆಯಲು ಸಭೆಯುವೆರು ತಿರಸ್ಕರಿಸಿದರೆ, ಅಂಥಾ ಸಭೆ ಯಾ ಮಿಟಿಂಗನ್ನು ಸಭಾಧ್ಯಕ್ಷರು ಮುಂದಕ್ಕೆ ಅಜ್ಜರ್ಗ ಮಾಡಬಹುದು

ಮಾತನಾಡಕೂಡದೆಂದು ನಿಷೇಧಿಸಲ್ಪಟ್ಟ ಕೌನ್ಸಿಲರು ತಮ್ಮ ಸ್ಥಾನದಲ್ಲಿ ಕೂತುಕೊಳ್ಳಬೇಕು

5A ಮಾತಾಡಕೂಡದೆಂದು ಸಭಾಧ್ಯಕ್ಷರಿಂದ ಹೇಳಿಸಿಕೊಂಡಂಥಾ ಕೌನ್ಸಿಲರು ಕ್ರಮದ ವಿಷಯದಲ್ಲಿ ಉಂಟಾಗಿರುವ ಸಂಕಯವು ವ್ಯವಸ್ಥೆಯಾಗುವವರೆಗೂ ಕೂತುಕೊಳ್ಳಬೇಕು ಪರಂತು ಸಭಾಧ್ಯಕ್ಷರು ಈ ವಿಷಯದಲ್ಲಿ ಮಾತಾಡಲು ಸದರಿ ಕೌನ್ಸಿಲರಿಗೆ ಅವಕಾಶ ಕೊಡಬಹುದು ಸಭಾಧ್ಯಕ್ಷರ ತೀರ್ಮಾನದ ಮೇಲೆ ವಿವಾದಿಸಬೇಕೆಂಬ ಅಭಿಲಾಷವುಳ್ಳ ಕೌನ್ಸಿಲರು ಮುಂದಿನ ಮಿಟಿಂಗಿನಲ್ಲಿ ಈ ವಿಷಯದಲ್ಲಿ ಒಂದು ಸೂಚನೆಯನ್ನು ತರಬಹುದು

ಮಿಟಿಂಗಿಗೆ ಸಂಬಂಧಪಟ್ಟ ಯಾವುದಾದರೂ ಒಂದು ವಿಷಯವನ್ನು ಇತರ ವಿಷಯಗಳಿಗಿಂತಲೂ ಮುಂಚಿತವಾಗಿಯೇ ಜಾಬ್ತಿಸಬಹುದು

6 ಮಾಡಬೇಕಾದ ಕಾರ್ಯಗಳನ್ನು ಯಾವ ಕ್ರಮದಲ್ಲಿ ನಡೆಸಬೇಕೆಂಬುವ ವಿಷಯವನ್ನಾಗಲಿ ಅಥವಾ ಮಿಟಿಂಗಿನಲ್ಲಿ ಜಾಬ್ತಿಸಬೇಕಾದ ಯಾವ ಸೂಚನೆಯನ್ನು ಸದರಿ ಮಿಟಿಂಗಿನಲ್ಲಿ ಯಾವ ಕ್ರಮವನ್ನನುಸರಿಸಿ ಜಾಬ್ತಿಸಬೇಕೆಂಬುವುದನ್ನಾಗಲಿ ಸಭಾಧ್ಯಕ್ಷರು ನಿರ್ಣಯಿಸಬೇಕು. ಈ ವಿಷಯದಲ್ಲಿ ಯಾವು

ದಾದರೂ ಬಂದು ಕಾರ್ಯವನ್ನಾಗಲಿ ಅಥವಾ ಯಾವುದಾದರೂ ಬಂದು ಸಲಹೆಯನ್ನಾಗಲಿ ಇತರ ಕಾರ್ಯಗಳಿಗಿಂತಲೂ ಮುಂಚಿತವಾಗಿ ಚರ್ಚಿಸಬೇಕೆಂದು ಒಬ್ಬ ಮೆಂಬರು ಸಲಹೆ ಕೊಡುವ ಪಕ್ಷದಲ್ಲಿ, ಅಂಥಾ ಸಲಹೆಯನ್ನು ಸಭಾಧ್ಯಕ್ಷರು ಮಾಟಿಂಗಿನಲ್ಲಿರುವ ಮೆಂಬರುಗಳ ಅಭಿಪ್ರಾಯವನ್ನು ಕೇಳಿ, ಸದರಿ ಸಲಹೆಯ ಪರವಾಗಿ ಅಥವಾ ಅದಕ್ಕೆ ವಿರೋಧವಾಗಿ ಕೊಡಲ್ಪಡುವ ಹೆಚ್ಚು ಮೆಂಬರುಗಳ ವೋಟು ಯಾ ಸಮ್ಮತಿಗಳಂತೆ ನಡೆಯತಕ್ಕದ್ದು

ಒಂದೇ ವಿಷಯಕ್ಕೆ ಸಂಬಂಧಪಟ್ಟ ಅನೇಕ ಅಂಕಗಳನ್ನು ಒಟ್ಟಾಗಿ ಸೇರಿಸುವುದು

7 ಒಂದೇ ದಿನದಲ್ಲಿ ಒಂದಕ್ಕಿಂತಲೂ ಹೆಚ್ಚು ಮಾಟಿಂಗುಗಳನ್ನು ಮಾಡಿದರೆ, ಒಂದೇ ವಿಷಯಕ್ಕೆ ಸಂಬಂಧಪಟ್ಟ ಎರಡು ಅಥವಾ ಹೆಚ್ಚಾದ ಚಿಲ್ಲರೆ ಅಂಕಗಳ ಪೈಕಿ ಕೆಲವು ಒಂದು ಮಾಟಿಂಗಿನಲ್ಲಿಯೂ ಮತ್ತೆ ಕೆಲವು ಅದೇ ದಿನದ ಮತ್ತೊಂದು ಮಾಟಿಂಗಿನಲ್ಲಿಯೂ ಚರ್ಚಿಸಲ್ಪಡುವುದೆಂದು ಮಾಟಿಂಗಿನ ವಿಷಯಾನುಕ್ರಮಣಿಕೆಯ ತಖ್ತೆಗಳಲ್ಲಿ ದಾಖಲಾಗಿದ್ದಾಗ್ಯೂ, ಅಂಥಾ ಸಂದರ್ಭದಲ್ಲಿ ಹಾಜರಾಗಿರುವ ಕೌನ್ಸಿಲರುಗಳ ಸಮ್ಮತಿಯನ್ನು ಪಡೆದು ಸಭಾಧ್ಯಕ್ಷರು ಅವುಗಳನ್ನೆಲ್ಲಾ ಒಂದೇ ವಿಷಯವಾಗಿ ಭಾವಿಸಿ ಒಂದು ಮಾಟಿಂಗಿನಲ್ಲಿ ಏಕಕಾಲದಲ್ಲಿಯೇ ಆಲೋಚನೆಯಿಂದ ಫೈಸಲಾಗತಕ್ಕ ಬಗ್ಗೆ ಇಟ್ಟು ಕೊಳ್ಳಬಹುದು

ಒಂದು ಸಲಹೆಯನ್ನು ವಿಭಾಗಿಸುವುದು

8 ಯಾವುದಾದರೂ ಒಂದು ಸಲಹೆಯಾಗಲಿ ಅಥವಾ ತಿದ್ದುಪಾಟಾಗಲಿ ಸ್ಪಷ್ಟವಾಗಿಲ್ಲದೆ ಇರೋಣವರಿಂದ, ಒಂದೇ ಸಲಹೆಯಾಗಿ ಚರ್ಚಿಸಿದ್ದಲ್ಲಿ ತೊಂದರೆಗೂ ಸಂದೇಹಕ್ಕೂ ಅವಕಾಶವಾಗುತ್ತದೆಂಬುದಾಗಿ ತಮಗೆ ತೋರಿದರೆ ಅಂಥಾ ಸಲಹೆ ಯಾ ತಿದ್ದುಪಾಟನ್ನು ಎರಡು ಅಥವಾ ಇದಕ್ಕೆ ಹೆಚ್ಚಾದ ಸಂಖ್ಯೆಯ ಸಲಹೆಗಳಾಗಿ ವಿಭಾಗಿಸುವುದಕ್ಕೆ ಸಭಾಧ್ಯಕ್ಷರು ಅಧಿಕಾರವುಳ್ಳವರಾಗಿರುತ್ತಾರೆ

ವಿಭಾಗಿಸಲ್ಪಟ್ಟ ಒಂದು ಸಲಹೆಯು ಒಂದಾವರ್ತಿಗಿಂತಲೂ ಹೆಚ್ಚಾಗಿ ಪ್ರಸ್ತಾಪಿಸಲ್ಪಡಬೇಕಾಗಿಯೂ ಅನುಮೋದಿಸಲ್ಪಡಬೇಕಾಗಿಯೂ ಇರುವುದಿಲ್ಲ

ಆದರೆ ಈ ನಿಬಂಧನೆಯನ್ನನುಸರಿಸಿ ಒಂದು ಸಲಹೆ ಅಥವಾ ಒಂದು ತಿದ್ದುಪಾಟು ವಿಭಾಗಿಸಲ್ಪಟ್ಟಿರೆ, ಹಾಗೆ ವಿಭಾಗಿಸಲ್ಪಟ್ಟ ಎರಡನೆ ಅಥವಾ ಅದರ ತರುವಾಯದ ಭಾಗಗಳು, ಸಭಾಧ್ಯಕ್ಷರು ಅನ್ಯಥಾ ತೀರ್ಮಾನಿಸಿದ ಹೊರತು, ಪ್ರತ್ಯೇಕವಾಗಿ ಮತ್ತೊಂದಾವರ್ತಿ ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಡಬೇಕಾದದ್ದಲ್ಲವು ಆದರೆ ಸಭಾಧ್ಯಕ್ಷರು ಹಾಗೆ ವಿಭಾಗಿಸಲ್ಪಟ್ಟ ಸಲಹೆಯ ಪ್ರತಿ ಒಂದು ಭಾಗವನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಒಂದಾದ ಮೇಲೆ ಮತ್ತೊಂದರ ಪ್ರಕಾರ ತೆಗೆದುಕೊಂಡು ಅವುಗಳ ವಿಷಯದಲ್ಲಿ ಕೌನ್ಸಿಲರುಗಳ ವೋಟಿಯ ಸಮ್ಮತಿಯನ್ನು ಕೇಳಬೇಕು

ಮಾಟಿಂಗಿನಲ್ಲಿ ಚರ್ಚೆಯಲ್ಲಿರುವ ವಿಷಯಕ್ಕೆ ಸದರಿ ಸಲಹೆಯ ಸಂಬಂಧಿಸಿದ್ದಾಗಿರಬೇಕು

9 ಮಾತಾಡಬೇಕೆಂದು ಏಳುವ ಪ್ರತಿ ಒಬ್ಬ ಕೌನ್ಸಿಲರೂ ಮಾಟಿಂಗಿನಲ್ಲಿ ಚರ್ಚೆಯಾಗುತ್ತಿರುವ ವಿಷಯವನ್ನು ಕುರಿತಾಗಲಿ, ಅಥವಾ ತಾವು ಉದ್ದೇಶಿಸಿದ ತಿದ್ದುಪಾಟನ್ನು ಕುರಿತಾಗಲಿ, ಅಥವಾ ಚರ್ಚೆಯ ಕ್ರಮವ ವಿಷಯವನ್ನು ಕುರಿತಾಗಲಿ ಮಾತಾಡತಕ್ಕದ್ದು, ಮತ್ತು ತಾನಿರುವ ಸ್ಥಳದಿಂದಲೇ ಯಾವಾಗ್ಯೂ ಸಭಾಧ್ಯಕ್ಷರಿಗೆ ಹೇಳಬೇಕು ಒಂದು ಸಲಹೆಯ ಅಥವಾ ತಿದ್ದುಪಾಟಿನ ವಿಷಯದಲ್ಲಿ ಕೌನ್ಸಿಲರು ತಾವು ಹೇಳತಕ್ಕದ್ದನ್ನು ಒಂದಾವರ್ತಿ ಹೇಳಿದ ನಂತರ ಪುನಹಾ ತದೇ ಸಲಹೆಯ ಅಥವಾ ತಿದ್ದುಪಾಟಿನ ವಿಷಯದಲ್ಲಿ ಮಾತಾಡಕೂಡದು

ಪರಂತು ಒಬ್ಬ ಕೌನ್ಸಿಲರು ಒಂದು ಸಲಹೆ ಅಥವಾ ತಿದ್ದುಪಾಟನ್ನು ಸೂಚಿಸಿದ ಮೇಲೆ, ಅದೇ ವಿಷಯವಾಗಿ ಮಾತಾಡುವುದಕ್ಕೆ ಎದ್ದಾಗ ಇತರ ಕೌನ್ಸಿಲರು ಯಾರೂ ಮಾತಾಡತಕ್ಕವರು ಇಲ್ಲವೆಂದು ಸಭಾಧ್ಯಕ್ಷರು ತಿಳಿಸಿದ ತರುವಾಯ, ಪುನಹಾ ಅದೇ ಕೌನ್ಸಿಲರು ತದೇ ವಿಷಯದಲ್ಲಿ ಸ್ವತಂತ್ರವಾಗಿ ಮಾತಾಡಲು ಅರ್ಹರಾಗಿರುತ್ತಾರೆ

ಅಲ್ಲದೆ, ಯಾವ ಕೌನ್ಸಿಲರಾದರೂ ಒಂದು ಸಲಹೆಯನ್ನಾಗಲಿ ತಿದ್ದುಪಾಟನ್ನಾಗಲಿ 'ನಾನು ಈ ಸಲಹೆಯನ್ನು ಅಥವಾ ತಿದ್ದುಪಾಟನ್ನು

ಅನುಮೋದಿಸುತ್ತೇನೆ " ಎಂಬುದಾಗಿ ಹೇಳುವುದರ ಮೂಲಕ ಆ ರೀತಿ ಅದನ್ನು ಅನುಮೋದಿಸಬಹುದು ಮತ್ತು ಇದರ ವಿಚಾರವಾಗಿ ತರುವಾಯ ಮಾತನಾಡುವುದಾಗಿ ಹೇಳಬಹುದು ಇದೂ ಅಲ್ಲದೆ ತಾವು ಆಡಿದ ಮಾತಿನಲ್ಲಿ ತೋರುವ ತಪ್ಪು ಅಭಿಪ್ರಾಯವನ್ನು ಸರಿಯಾಗಿ ವಿವರಿಸಿ ಹೇಳಲು ಅಪೇಕ್ಷಿಸುವ ಕೌನ್ಸಿಲರು ಸಭಾಧ್ಯಕ್ಷರ ಅಪ್ಪಣೆಯನ್ನು ಪಡೆದು ಆರೀತಿ ಮಾಡಬಹುದು

ಪಾಡಿಕೆಯಾದ ತೀರ್ಮಾನಗಳನ್ನು ಇಬ್ಬರಿಂದಲೂ ಪ್ರಸ್ತಾಪಿಸಲ್ಪಡದೆ ಅಥವಾ ಅನುಮೋದಿಸಲ್ಪಡದೆ ಮಿಾಟಿಂಗಿನಲ್ಲಿ ಹೇಳಬಹುದು

10 ವಾಡಿಕೆಯಾದ ತೀರ್ಮಾನಗಳು ಎಂದರೆ ಕ್ಲುಪ್ತಕಾಲಗಳಲ್ಲಿ ತಯಾರಿಸಲ್ಪಡುವ ತಖ್ತೆಗಳನ್ನು ರಿಕಾರ್ಡು ಮಾಡುವುದು, ಅಥವಾ ಕಮ್ಮಿಟಿಗಳ ನಡವಳಿಕೆಗಳನ್ನು ಮಂಜೂರ್ಮಾಡುವುದು, ಇವುಗಳನ್ನು ಒಬ್ಬರಿಂದಲೂ ಪ್ರಸ್ತಾಪಿಸಲ್ಪಡದೆ ಅಥವಾ ಅನುಮೋದಿಸಲ್ಪಡದೆ ಸಭಾಧ್ಯಕ್ಷರು ಮಿಾಟಿಂಗಿನಲ್ಲಿ ಇಡಬಹುದು ಸಭಾಧ್ಯಕ್ಷರನ್ನು ಚುನಾಯಿಸತಕ್ಕ ವಿಷಯದಲ್ಲಿ ಮಾಡಲ್ಪಟ್ಟ ಸಲಹೆ, ಅಡ್ಜರ್ನ್‌ಮೆಂಟು ವೆಗೈರೆಗಳು ಅನುಮೋದಿಸಲ್ಪಡತಕ್ಕದ್ದು , ಆದರೆ ಇವು ಬರಹ ಮೂಲಕ ಇರಬೇಕಾದ್ದಿಲ್ಲವು

ಪ್ರತಿ ಒಂದು ಇತರ ಸಲಹೆಯೂ ಮತ್ತು ತಿದ್ದುಪಾಟೂ ಬರವಣಿಗೆಯಲ್ಲಿ ಇರಬೇಕು ಮತ್ತು ಅನುಮೋದಿಸಲ್ಪಡಬೇಕು

ಮೇಲೆ ವಿನಾಯಿಸಲ್ಪಟ್ಟ ಮೇರೆಗೆ ಅಲ್ಲದೆ ಇತರ ಸಂದರ್ಭಗಳಲ್ಲೆಲ್ಲಾ ಪ್ರತಿ ಒಂದು ಸೂಚನೆಯೂ ಮತ್ತು ಪ್ರತಿ ಒಂದು ತಿದ್ದುಪಾಟೂ ಬರವಣಿಗೆಯಲ್ಲಿದ್ದು ಅನುಮೋದಿಸಲ್ಪಡಬೇಕು

ಕಮಿಟಿಗಳ ತೀರ್ಮಾನವು ಒಬ್ಬರಿಂದ ಪ್ರಸ್ತಾಪಿಸಲ್ಪಟ್ಟು ಮತ್ತೊಬ್ಬರಿಂದ ಅನುಮೋದಿಸಲ್ಪಡತಕ್ಕದ್ದು

ಮ್ಯಾನೇಜಿಂಗ್ ಅದವಾ ಇತರ ಕಮ್ಮಿಟಿಯ ಒಂದು ತೀರ್ಮಾನವು ಅಂಗೀಕರಿಸತಕ್ಕ ಬಗ್ಗೆ ಜನರಲ್ ಮಿಾಟಿಂಗಿಗೆ ಕಳುಹಿಸಲ್ಪಟ್ಟಾಗ, ಅಂದಾದ್ದರ ಅಂಗೀಕಾರವು ಸಾಧಾರಣವಾಗಿ ಕಮ್ಮಿಟಿಯ ಮೆಂಬರುಗಳಿಂದ ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಡತಕ್ಕದ್ದು

ತಿದ್ದುಪಾಟುಗಳು

11 ಸಲಹೆಯು ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಟ್ಟ ನಂತರ ಅದರಮೇಲೆ ತಿದ್ದುಪಾಟಿಗಾಗಿ ಒಬ್ಬ ಕೌನ್ಸಿಲರು ಸಲಹೆಯನ್ನು ಕೂಡಬಹುದು

ಪರಂತು ಒಂದು ಸಲಹೆಯ ಮೇಲೆ ಒಂದಕ್ಕಿಂತಲೂ ಹೆಚ್ಚಾದ ತಿದ್ದುಪಾಟುಗಳನ್ನು ಯಾವ ಕೌನ್ಸಿಲರೂ ಸೂಚಿಸಕೂಡದು ಆದರೆ ಅಂದಾಸುಹೆಯು ಬಡ್ಜಟ್ ಯಾ ಜಮೊ ಖರ್ಚು ಅಂದಾಜನ್ನು ಅಥವಾ ಸಾಮಾನ್ಯ ನಿಬಂಧನಗಳನ್ನು ಮಂಜೂರ್ಮಾಡುವುದಕ್ಕೆ ಆಲೋಚನೆ ಹೇಳಿದ್ದ ಪಕ್ಷದಲ್ಲೂ ಅಥವಾ ಅದು ನಾನಾ ಭಾಗಗಳಾಗಿ ಅನೇಕ ತಿದ್ದುಪಾಟುಗಳಿಗೆ ಅರ್ಹವಾದುದಾಗಿ ಇದ್ದರೂ, ಅಂಥಾ ಸಂದರ್ಭದಲ್ಲಿ ಅನೇಕ ತಿದ್ದುಪಾಟುಗಳನ್ನು ಸೂಚಿಸಬಹುದು

ಸಭಾಧ್ಯಕ್ಷರ ಸಲಹೆಯನ್ನು ಮಿಾಟಿಂಗಿಗೆ ಓದಿ ಹೇಳಬೇಕು

12 ಒಂದು ತಿದ್ದುಪಾಟನ್ನು ಸೂಚಿಸಿದವರು ಆ ತಿದ್ದುಪಾಟನ್ನು ಬಾಯಿಂದ ಹೇಳಬೇಕು ಅದವಾ ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕೂತು ಕೊಳ್ಳುವುದಕ್ಕೆ ಮುಂಚೆಯೇ ಎದರಿಗೆ ಬರವಣಿಗೆಯಲ್ಲಿ ಕೊಡತಕ್ಕದ್ದು ಒಂದು ಸಲಹೆಯನ್ನು ಅಥವಾ ತಿದ್ದುಪಾಟನ್ನು ಸೂಚಿಸುವವರು ತಮ್ಮ ಸ್ಥಾನದಲ್ಲಿ ಕೂತನಂತರ, ಸಭಾಧ್ಯಕ್ಷರು ಸದರಿ ಸೂಚನೆಯನ್ನು ಅಥವಾ ತಿದ್ದುಪಾಟನ್ನು ಮಿಾಟಿಂಗಿಗೆ ಓದಿಹೇಳಿ ಅದನ್ನು ಯಾವ ಕೌನ್ಸಿಲರಾದರೂ ಅನುಮೋದಿಸುತ್ತಾರೆಯೇ ಎಂತಾ ಕೇಳಬೇಕು , ಸದರಿ ಸೂಚನೆ ಅಥವಾ ತಿದ್ದುಪಾಟನ್ನು ಯಾರಾದರೂ ಅನುಮೋದಿಸದ ಹೊರತು ಅದರಮೇಲೆ ಚರ್ಚೆ ಮಾಡುವುದಕ್ಕೆ ಸಭಾಧ್ಯಕ್ಷರು ಯಾರಿಗೂ ಅಪ್ಪಣೆ ಕೊಡಕೂಡದು ಆ ಸಲಹೆಯನ್ನು ಅಥವಾ ತಿದ್ದುಪಾಟನ್ನು ಯಾವ ಕೌನ್ಸಿಲರೂ ಅನುಮೋದಿಸದೆ ಇದ್ದರೆ, ಸಭಾಧ್ಯಕ್ಷರು ಸದರಿ ಸಲಹೆ ಅಥವಾ ತಿದ್ದುಪಾಟು ನಷ್ಟವಾಯಿತೆಂದು ಎಂದರ ಅದನ್ನು ಮಂಜೂರ್ಮಾಡುವುದಿಲ್ಲವೆಂದು ಹೇಳತಕ್ಕದ್ದು

ಉಪನ್ಯಾಸವನ್ನು ಓದತಕ್ಕದ್ದಲ್ಲ

13 ಕೌನ್ಸಿಲರು ತಮ್ಮ ಉಪನ್ಯಾಸವನ್ನು ಓದಕೂಡದು , ಆದರೆ ಜ್ಞಾಪಕಾರ್ಥವಾಗಿ ಬರೆದುಕೊಂಡಿದ್ದ ಟಿಪ್ಪಣಿಯ ನೋಟನ್ನು ನೋಡಬಹುದು ಮತ್ತು ಸಭಾಧ್ಯಕ್ಷರ ಅನುಮತಿಯ ಮೇಲೆ ತಮ್ಮ ಭಾಷಣಕ್ಕೆ ಸಂ

ಬಂಧಪಟ್ಟ ಮಟ್ಟಿಗೆ ಪುಸ್ತಕಗಳಲ್ಲಿ ಅಥವಾ ದಸ್ತೈವೇಜುಗಳಲ್ಲಿ ಇರುವ ವಾಕ್ಯಗಳನ್ನು ಓದಬಹುದು

ಮುಂದಾಗಿ ತಿಳಿಸಲ್ಪಟ್ಟ ಸಂಹೆಯು ವಿಷಯದಲ್ಲಿ ಮೊದಲು ಸಲಹೆ ಕೊಟ್ಟವರು ಗೈರುಹಾಜರಾದರೆ ಅಥವಾ ಅವರಿಗೆ ಇಷ್ಟವಿಲ್ಲದೆ ಇದ್ದರೆ ಮತ್ತಾವ ಕೌನ್ಸಿಲರಾದರೂ ಅಂಥಾ ಸಲಹೆಯನ್ನು ಪ್ರಸ್ತಾಪಿಸಬಹುದು

14 ಬಂದು ಸಂಹೆಯನ್ನು ಪ್ರಸ್ತಾಪಿಸುವುದಾಗಿ ಒಬ್ಬ ಕೌನ್ಸಿಲರು ಮುಂಚಿತವಾಗಿ ನೋಟೀಸು ಕೊಟ್ಟು ಇದ್ದು ನಂತರ ಅವರು ಮೀಟಿಂಗಿನಲ್ಲಿ ಹಾಜರಿಲ್ಲದ ಹೋದರೂ ಅಥವಾ ಮೀಟಿಂಗು ಸೇರುವುದಕ್ಕೆ ಮುಂಚೆಯೆ ಅವರಿಗೆ ಕೌನ್ಸಿಲರ್ ಕೆಲಸ ತಪ್ಪಿದರೂ ಅಥವಾ ತಾವು ತಿಳಿಸಿದ್ದ ಸಂಹೆಯನ್ನು ಪ್ರಸ್ತಾಪಿಸುವುದಕ್ಕೆ ಮನಸ್ಸಿಲ್ಲದೆ ಹೋದರೂ, ಮೀಟಿಂಗಿನಲ್ಲಿ ಹಾಜರಿರುವ ಯಾವ ಕೌನ್ಸಿಲರಾದರೂ ಸರಿಯೇ ಸಭಾಧ್ಯಕ್ಷರ ಅನುಮತಿಯನ್ನು ಪಡೆದು ನೋಟೀಸು ಮೂಲಕ ತಿಳಿಸಲ್ಪಟ್ಟ ಸದರಿ ಸಂಹೆಯನ್ನು ಪ್ರಸ್ತಾಪಿಸಬಹುದು

ಮೊದಲು ಮಾಡಲ್ಪಟ್ಟ ಸಲಹೆಗಳಲ್ಲಿರುವ ಕೆಲವು ಪದಗಳನ್ನು ಬಿಟ್ಟು ಬಿಡುವುದಕ್ಕಾಗಿ ತಿದ್ದುಪಾಟುಗಳು ಸೂಚಿಸಲ್ಪಟ್ಟದ್ದಲ್ಲಿ ಅಂಥಾ ತಿದ್ದುಪಾಟುಗಳು ಸ್ಪಷ್ಟವಾಗಿಯೂ ಸಂಗತವಾಗಿಯೂ ಇರಬೇಕು ಹಿಂದೆ ಹೇಳಲ್ಪಟ್ಟ ಸಲಹೆಗಳ ನಿಷೇಧವಾಚಕಗಳಾಗಿ ಮಾತ್ರ ಇರಕೂಡದು

15 ಬಂದು ತಿದ್ದುಪಾಟು ಸಾಮಾನ್ಯವಾಗಿ ಬಂದು ಸಂಹಯ ರೂಪವಾಗಿದ್ದು ಮೂದಲು ಹೇಳಲ್ಪಟ್ಟ ಸಲಹೆಯಲ್ಲಿ ಕೆಲವು ಪದಗಳನ್ನು ಬಿಟ್ಟುಬಿಡತಕ್ಕದೆಂದಾಗಲಿ ಕೆಲವು ಪದಗಳನ್ನು ಅದರಲ್ಲಿ ಸೇರಿಸತಕ್ಕದಂದಾಗಲಿ ಅಥವಾ ಹೆಚ್ಚಾಗಿ ಕೆಲವು ಪದಗಳನ್ನು ಅದಕ್ಕೆ ಸೇರಿಸಬೇಕೆಂದಾಗಲಿ ತಿಳಿಸತಕ್ಕದ್ದು

ಪ್ರತಿ ಬಂದು ತಿದ್ದುಪಾಟು ಯಾವ ಸಂಹೆಯನ್ನು ತಿದ್ದುವುದಕ್ಕಾಗಿ ಸಲಹೆ ಹೇಳಲ್ಪಡುತ್ತದೆಯೋ ಅಂಥಾ ಸಂಹೆಗೆ ಸಂಬಂಧಪಟ್ಟಿದ್ದಾಗಿಯೂ ಮತ್ತು ಅದರೊಡನೆ ಓದಿದರೆ ಚೆನ್ನಾಗಿ ತಿಳಿಯುವಂಥಾ ವಾಕ್ಯರಚನೆಯುಳ್ಳದ್ದಾಗಿಯೂ ಇರಬೇಕು ಸಂಹೆಯನ್ನು ನಿಷ್ಪಾದಿಸತಕ್ಕ ತರಹದಲ್ಲಿ ತರ್ಪಡುವ ತಿದ್ದುಪಾಟನ್ನು ಅಂಗೀಕರಿಸತಕ್ಕದ್ದಲ್ಲ

ತಿದ್ದುಪಾಟುಗಳನ್ನು ಮುಂಚಿತವಾಗಿ ಪ್ರೆಸಿಡೆಂಟರಿಗೆ ತಿಳುಹಿಸಬಹುದು

16 ಬಂದು ಸಲಹೆಗೆ ತಿದ್ದುಪಾಟನ್ನು ಸೂಚಿಸಬೇಕೆಂದಿರುವ ಕೌನ್ಸಿಲರು ಅಂದಾ ತಿದ್ದುಪಾಟನ್ನು ಪ್ರಸಿಡೆಂಟರಿಗಾಗಲಿ ಅಥವಾ ಸಭಾಧ್ಯಕ್ಷರಿಗಾಗಲಿ ಬರಹಮೂಲಕವಾಗಿ ಮೊದಲೇ ತಿಳಿಸಬಹುದು ತದವಾ ಸದ್ದಾಗಿ ಕೊಡಬಹುದು

ಬಂದಕ್ಕಿಂತಲೂ ಹೆಚ್ಚಾದ ತಿದ್ದುಪಾಟುಗಳು ಬಂದಲ್ಲಿ ಅವುಗಳನ್ನು ಆಲೋಚಿಸತಕ್ಕ ಕ್ರಮ

17 ಬಂದು ಸಂಹೆಯು ಪ್ರಸ್ತಾಪಿಸಲ್ಪಟ್ಟ ನಂತರ ಮೊದಲಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರಿಗಾಗಲಿ ಅಥವಾ ಸಭಾಧ್ಯಕ್ಷರಿಗಾಗಲಿ ತಿಳಿಸಲ್ಪಟ್ಟ ಯಾ ಕೊಡಲ್ಪಟ್ಟ ಸದರಿ ಸಂಹೆಯ ತಿದ್ದುಪಾಟುಗಳು ತಂಗೀಕರಿಸಲ್ಪಟ್ಟಲ್ಲಿ ಅವುಗಳು ತಿದ್ದುಪಾಟುದ ಸಲಹೆಯಲ್ಲಿ ಯಾವ ಕ್ರಮವನ್ನು ತಿಸುಸುಸುತ್ತ ವಯೋ ಅದೇ ಕ್ರಮದಲ್ಲಿ ಏರ್ಪಡಿಸಲ್ಪಡತಕ್ಕದ್ದು, ಅಲ್ಲದೆ ಬಂದ್ರ ಕೂಡ್ರ ತಿದ್ದುಪಾಟುಗಳು ಸಭಾಧ್ಯಕ್ಷರಿಗೆ ಹೇಳಲ್ಪಟ್ಟಲ್ಲಿ ಎಳವಾ ಕೂಡಲ್ಪಟ್ಟಲ್ಲ ತದ್ರ ಗಳನ್ನು ಅದೇ ಕ್ರಮವಲ್ಲಿ ಸೇರಿಸಿಕೊಳ್ಳತಕ್ಕದ್ದು, ಮತ್ತ ಸಭಾಧ್ಯಕ್ಷರು ತಿದ್ದುಪಾಟುಗಳನ್ನು ಸೂಚಿಸುವವರಿಗೆ ತದೇ ಕ್ರಮವನ್ನನುಸರಿಸಿ ತಮ್ಮ ತಮ್ಮ ತಿದ್ದುಪಾಟುಗಳನ್ನು ಪ್ರಸ್ತಾಪಿಸಬಹುದೆಂದು ಹೇಳತಕ್ಕದ್ದು

ಬಂದು ತಿದ್ದುಪಾಟಿನ ವಿಷಯವು ಇತ್ಯರ್ಥವಾದ ಮೇಲೆ ಮತ್ತೊಂದನ್ನು ತೆಗೆದುಕೊಳ್ಳತಕ್ಕದ್ದು

18 ಬಂದು ತದ್ದುಪಾಟಿನ ವಿಷಯವು ಇತ್ಯರ್ಥವಾದಮೇಲೆ ಮತ್ತೊಂದನ್ನು ಆಲೋಚನೆಗೆ ತೆಗೆದುಕೊಳ್ಳಬೇಕು ತದರ ಪ್ರಕಾರ ಬಂದು ತಿದ್ದುಪಾಟು ಸಂಹೆ ಕೂಡಲ್ಪಟ್ಟ ತರುವಾಯಿಸಲ್ಪಟ್ಟ ನಂತರ ಯಾವ ಕೌನ್ಸಿಲರಾದರೂ ಎಂದಾ ತದ್ದುಪಾಟಿನಲ್ಲಿಕೆಲವ್ರ ಪದಗಳನ್ನು ಬಿಟ್ಟು ಬಿಡಬೇಕೆಂದಾಗಲಿ ಸೇರಿಸಬೇಕೆಂದಾಗಲಿ ಸಂಹೆ ಕೂಡಬಹುದು ಈರೀತಿ ಹೇಳಿದ ಮೇಲೆ ಸಭಾಧ್ಯಕ್ಷರು ಸದರಿ ಸಂಹೆಯನ್ನು ತಿಸುಸುಸತಕ್ಕವರು ಯಾರಾದರೂ ಇರುತ್ತಾರೆಯೇ ಎಂದು ಕೇಳಿ ಹಾಗೆ ಯಾವ ಕೌನ್ಸಿಲರಾದರೂ ಅದನ್ನು ಅನುಮೋದಿಸಿದರೆ ತಂದಾ ತದ್ದುಪಾಟಿನಲ್ಲಿ ಒಸಾಭಿಪ್ರಾಯವೆಯಾಗಬೇಕೆಂಬ ಸಲಹೆಯು ಮೀಟಿಂಗಿನಲ್ಲಿ, ತಗ ತಳಸ್ಪಡತಕ್ಕ ವಿಷಯವಾಗುತ್ತದೆ

ಮೊದಲೇ ಇತ್ಯರ್ಥವಾದ ತಿದ್ದುಪಾಟಿನ ಪದಗಳ ಬದಲಾವಣೆಯನ್ನು ಮಾಡತಕ್ಕದ್ದಲ್ಲ

19 ಮೊದಲಿನ ಸಲಹೆಯು ಭಾಗವಾಗಿರಕ್ಕದ್ದೆಂದು ಅಥವಾ ಅದಕ್ಕೆ ಹೆಚ್ಚಾಗಿ ಸೇರಿಸತಕ್ಕದ್ದೆಂದು ಮೊದಲೇ ತೀರ್ಮಾನಿಸಲ್ಪಟ್ಟ ಪದಗಳಿಗೆ ಹೆಚ್ಚಾಗಿ ಪದಗಳನ್ನು ಸೇರಿಸಬಹುದೇ ಹೊರತು ಅವುಗಳಿಗೆ ಮತ್ಯಾವ ತಿದ್ದುಪಾಟನ್ನೂ ಮಾಡತಕ್ಕದ್ದಲ್ಲ

ಖಂಡಾವರ್ತಿ ನಿರಾಕರಿಸಲ್ಪಟ್ಟ ತಿದ್ದುಪಾಟನ್ನು ಪುನಹಾ ಸಲಹೆ ಕೊಡಕೂಡದು

20 ಮಿಾಟಿಂಗಿನಲ್ಲಿ ನಿರಾಕರಿಸಲ್ಪಟ್ಟ ಸಲಹೆ ಅಥವಾ ತಿದ್ದುಪಾಟಿಗೆ ಸರಿಯಾದ ಸಾರಾಂಶವುಳ್ಳ ಮತ್ತೊಂದು ತಿದ್ದುಪಾಟನ್ನು ಸಲಹೆ ಕೊಡತಕ್ಕದ್ದಲ್ಲ

ಸಲಹೆ ಅಥವಾ ತಿದ್ದುಪಾಟನ್ನು ವಾಪಸು ತೆಗೆದುಕೊಳ್ಳತಕ್ಕದ್ದಲ್ಲ.

21 ಪ್ರಸ್ತಾಪಿಸಲ್ಪಟ್ಟ ಅನುಮೋದಿಸಲ್ಪಟ್ಟ ಒಂದು ಸಲಹೆ ಅಥವಾ ತಿದ್ದುಪಾಟನ್ನು ಸಭೆಯವರ ಅಪ್ಪಣೆ ವಿನಾ ವಾಪಸು ತೆಗೆದುಕೊಳ್ಳಕೂಡದು

ಸಭಾಧ್ಯಕ್ಷರು ತಮ್ಮ ಕುರ್ಚಿಯನ್ನು ಬಿಟ್ಟು ಏಳದೇನೇ ಸಲಹೆಗಳನ್ನು ತೆಗೆಯಬಹುದು

22 ಸಭಾಧ್ಯಕ್ಷರು ತಮ್ಮ ಕುರ್ಚಿಯನ್ನು ಬಿಟ್ಟು ಏಳದೇನೇ ಸಲಹೆಗಳನ್ನು ಅಥವಾ ತಿದ್ದುಪಾಟುಗಳನ್ನು ಪ್ರಸ್ತಾಪಿಸಬಹುದು, ಅನುಮೋದಿಸಬಹುದು, ಅವುಗಳ ವಿಷಯವಾಗಿ ಮಾತಾಡಬಹುದು ಮತ್ತು ಸಮ್ಮತಿ ಕೊಡಬಹುದು

ವೋಟ್ ಯಾ ಸಮ್ಮತಿ ಕೊಡುವುದು

23 ಒಂದು ಸಲಹೆಯ ವಿಷಯದಲ್ಲಿ ಎಲ್ಲರ ವೋಟು ಯಾ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿ ಬಂದಾಗ, ಸಭಾಧ್ಯಕ್ಷರು ಬೇಕಾದವರು ಕೈ ಎತ್ತುವುದರ ಮೂಲಕ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಹೇಳಬೇಕು ಆಮೇಲೆ ಸದರಿ ಸಭಾಧ್ಯಕ್ಷರು ಅದವಾ ಅವಳ ಅಪ್ಪಣೆಮೇರೆಗೆ ಒಬ್ಬ ಕ್ಲರ್ಕನಲರು ಬಂದು ಸಭೆಯ ಪರವಾಗಿ ಅಥವಾ ಅದಕ್ಕೆ ವಿರೋಧವಾಗಿ ಎತ್ತಲ್ಪಟ್ಟ ಕೈಗಳನ್ನು ಎಣಿಸಿ ಫಲಿತಾಂಶವನ್ನು ಹೇಳತಕ್ಕದ್ದು ಈ ರೀತಿ ಹೇಳಲ್ಪಟ್ಟ ಸಂಖ್ಯೆಯು ಸರಿಯಾದ ಸಂಖ್ಯೆಯಲ್ಲವಂದು ಯಾವ ಕ್ಲರ್ಕಿಸಿರಾದರೂ ಹೇಳಿದರೆ ಕೈಗಳನ್ನು ಎರಡನೆ ದಫಾ ಎಣಿಸತಕ್ಕದ್ದು ಪರಂತು ಯಾರಾದರೂ ಇಬ್ಬರು ಕ್ಲರ್ಕಿಸಿರುಗಳು ಮುಂಬರುಗಳ ಹೆಸರನ್ನು ಬರೆದು ಕೊಳ್ಳಬೇಕೆಂದು ಕೇಳಿದರೆ, ಸಭಾಧ್ಯಕ್ಷರು ಕ್ಲರ್ಕನಲರುಗಳ ಹೆಸರುಗಳನ್ನು ಕೂಗಿ ಬಂದು ಸಭೆಯ ಪರವಾಗಿ ಅಥವಾ ಅದಕ್ಕ ವಿರೋಧವಾಗಿ ಸಮ್ಮತಿ ಕೂಡುವ ಕ್ಲರ್ಕನಲರುಗಳ ಹೆಸರುಗಳನ್ನು ಮಿಾಟಿಂಗಿಗೆ ಸಂಬಂಧಪಟ್ಟ ಮಿನಿಟ್ ಯಾ ವಿಷಯ ಸಂಗ್ರಹದಲ್ಲಿ ಬರೆಯಬೇಕು

ಸಭಾಧ್ಯಕ್ಷರು ತಮ್ಮ ವೋಟ್ ಯಾ ಸಮ್ಮತಿಯನ್ನು ಕೂಡುವುದಕ್ಕೆ ಇಷ್ಟವಿಲ್ಲದೆ ಇದ್ದ ಹೊರತು, ಇತರ ಸಂದರ್ಭಗಳಲ್ಲಿ ಬಂದು ವಿಷಯದ ಪರವಾಗಿ ಅಥವಾ ಅದಕ್ಕ ವಿರೋಧವಾಗಿ ಬಂದ ವೋಟ್ ಯಾ ಸಮ್ಮತಿಗಳನ್ನು ತಿಳಿಸುವುದಕ್ಕೆ ಮುಂಚೆಯೇ ತಮ್ಮ ವೋಟು ಯಾ ಸಮ್ಮತಿಯನ್ನು ತಿಳಿಸಬೇಕು ಮತ್ತು ಅದೇ ವಿಷಯದಲ್ಲಿ ಸಮಸಂಖ್ಯೆಯು ಸಮ್ಮತಿಗಳು ಬಂದಲ್ಲಿ ಸಭಾಧ್ಯಕ್ಷರು ಇತ್ಯರ್ಥಾರ್ಹವಾದ ತಮ್ಮ (Casting vote) ಹೆಚ್ಚು ಸಂಖ್ಯೆ ಸಮ್ಮತಿಯನ್ನು ತಿಳಿಸತಕ್ಕದ್ದು

ಯಾವ ಮೆಂಬರನ್ನೂ ವೋಟ್ ಯಾ ಸಮ್ಮತಿ ಕೂಡತಕ್ಕ ವಿಷಯದಲ್ಲಿ ಬಲಾತ್ಕರಿಸಕೂಡದು

24 ಮಿಾಟಿಂಗಿನಲ್ಲಿ ಹಾಜರಿರುವ ಯಾವ ಕ್ಲರ್ಕಿಸಿರಾದರೂ ತಮ್ಮ ಸಮ್ಮತಿಯನ್ನು ತಿಳಿಸದ ಬಿಟ್ಟುಬಿಡಬಹುದು ಮಿಾಟಿಂಗಿನ ಸಮಕ್ಷಮ ತರಲ್ಪಟ್ಟ ಒಂದು ವಿಷಯವು ಒಂದು ಕಮಿಟಿಯ ರಿಪೋರ್ಟನ್ನಾಗಲಿ ಅಥವಾ ನಡವಳಿಕೆಗಳನ್ನಾಗಲಿ ಮೆಂಜೂರ್ಮಾಡತಕ್ಕದ್ದಾಗಿದ್ದರೆ ತ ಕಮಿಟಿಯ ಮೆಂಬರುಗಳು ತಮ್ಮ ಸಮ್ಮತಿಯನ್ನು ಕೊಡಬಹುದು ಒಬ್ಬ ಕ್ಲರ್ಕಿಸಿರ ನಡತೆಯ ವಿಷಯದಲ್ಲಿ ಪ್ರಶ್ನೆ ಬಂದಿದ್ದಲ್ಲಿ ತ ಕ್ಲರ್ಕಿಸಿರು ಆ ವಿಷಯದಲ್ಲಿ ತಮ್ಮ ವೋಟನ್ನು ಕೂಡಬಹುದು

ಸಮಸಂಖ್ಯೆಯ ವೋಟುಗಳು ಯಾ ಸಮ್ಮತಿಗಳು ಕೊಡಲ್ಪಟ್ಟು ಸಭಾಧ್ಯಕ್ಷರು ಇತ್ಯರ್ಥಕ್ಕ ಅರ್ಹವಾದ ತಮ್ಮ ಹೆಚ್ಚು ಸಂಖ್ಯೆ ಸಮ್ಮತಿಯನ್ನು ಕೂಡದೆ ಹೋದರೆ ಅಂದಾ ಸಲಹೆಯು ಅಂಗೀಕರಿಸಲ್ಪಟ್ಟಿದೆಂದಾಗಲಿ ಅದವಾ ತಿರಸ್ಕರಿಸಲ್ಪಟ್ಟಿದೆಂದಾಗಲಿ ಭಾವಿಸತಕ್ಕದ್ದಲ್ಲವ್ರ ಅದನ್ನು

ಮುಂದೆ ಯಾವ ಮಿಾಟಿಂಗಿನಲ್ಲಿ ಆದರೂ ಆಲೋಚನೆಗಾಗಿ ತರಬಹುದಾಗಿರುತ್ತದೆ

ಬಡಿಜಟ್ ಯಾ ಅಂದಾಜು ಖರ್ಚಿನ ಚರ್ಚೆ

26. ಬಂದು ಬಡಿಜಟ್ ಅಥವಾ ರೀ ಅಪ್ರೊಪ್ರಿಯೇಷನ್ ತಖ್ತೆಯು (ಎಂದರೆ ಬಂದು ಬಾಬಿನಲ್ಲಿ ಆದ ಹೆಚ್ಚು ಖರ್ಚನ್ನು ಮತ್ತೊಂದು ಬಾಬಿನಲ್ಲಿ ವಹಿಸಬೇಕೆಂಬ ವಿಷಯದಲ್ಲಿ ತಯಾರಾಗತಕ್ಕ ತಖ್ತೆ) ಬಂದು ಜನರಲ್ ಮಿಾಟಿಂಗಿನ ಮುಂದೆ ತರಲ್ಪಟ್ಟಲ್ಲಿ ಇಡರಡಿ ಕಂಡ ನಡವಳಿಕೆಯನ್ನು ಆಚರಿಸತಕ್ಕದ್ದು —

(1) ಸಭಾಧ್ಯಕ್ಷರು ಸದರಿ ಜಮಾ ಮತ್ತು ಖರ್ಚಿನ ಗೋಷ್ವಾರೆಗಳ ಪ್ರತಿ ಬಂದು ಬಾಬನ್ನು ಓದಿಹೇಳಿ ಅವುಗಳಿಗೆ ಪ್ರಸ್ತಾಪಕರೂ ಅನುಮೋದಕರೂ ಇಲ್ಲದೇನೇ ಅವುಗಳನ್ನು ಮಿಾಟಿಂಗಿನಲ್ಲಿ ತಂದು "ಈ ಬಾಬು ಬಡಿಜಟ್ಟಿನಲ್ಲಿ ಅಥವಾ ರೀ ಅಪ್ರೊಪ್ರಿಯೇಷನ್ ತಖ್ತೆಯಲ್ಲಿ ಬಂದು ಭಾಗವಾಗಿ ಇರಬೇಕೋ" ಎಂಬ ಪ್ರಶ್ನೆಯನ್ನು ಕೇಳಬೇಕು

(2) ಯಾವ ಕೌನ್ಸಿಲರಾದರೂ ಸದರಿ ಬಾಬನ್ನು ಕಮ್ಮಿಮಾಡಬೇಕೆಂದಾಗಲಿ, ಹೆಚ್ಚು ಮಾಡಬೇಕೆಂದಾಗಲಿ ಅದವಾ ವಜಾಮಾಡಬೇಕೆಂದಾಗಲಿ ಸಲಹೆ ಕೊಟ್ಟು ಅದನ್ನು ಮತ್ತೊಬ್ಬರು ಅನುಮೋದಿಸಿದರೆ ಆಂದಾ ಸಂಶಯು ತಿದ್ದುಪಾಟಾಗಿ ಎಣಿಸಲ್ಪಟ್ಟು ಮಿಾಟಿಂಗಿನಲ್ಲಿ ಇತ್ಯರ್ಥವಾಗಬೇಕಾವ ವಿಷಯವಾಗುತ್ತದೆ

ಜನರಲ್ ಮಿಾಟಿಂಗಿನಲ್ಲಿ ಕೌನ್ಸಿಲರುಗಳು ಬಂದು ಕಮಿಟಿಯಾಗಿ ಏರ್ಪಡಿಸಿಕೊಳ್ಳಬಹುದು

27 ಮಿಾಟಿಂಗಿನ ಮುಂದಿರುವ ಬಂದು ವಿಷಯವನ್ನು ಪರ್ಯಾಲೋಚಿಸತಕ್ಕ ಬಗ್ಯೆ ಕೌನ್ಸಿಲರುಗಳು ತಾವಾಗಿಯೇ ಬಂದು ಕಮಿಟಿಯಾಗಿ ಏರ್ಪಡಿಸಿಕೊಂಡು ಸದರಿ ಮಿಾಟಿಂಗಿನಲ್ಲಿ ತೀರ್ಮಾನವನ್ನು ಮಾಡಬಹುದು ಇಂದಾ ಕಮಿಟಿಯಲ್ಲಿ ಬಂದು ಸಂಪೆಯನ್ನು ತರುವಂಥದಿಸಬೇಕಾವ ಅವಶ್ಯವಿರುವುದಿಲ್ಲ ಮತ್ತು ಬಬ್ಬ ಕೌನ್ಸಿಲರು ಇಲ್ಲಿ ಎನೇಕ ವಿಷಯ ಮಾತಾಡಬಹುದು ಕಮಿಟಿಯವರು ತಮ್ಮ ತೀರ್ಮಾನವನ್ನು ತವೇ ಮಿಾಟಿಂಗಿನಲ್ಲಾಗಲಿ ಅಥವಾ ಮುಂದಿನ ಮಿಾಟಿಂಗಿನಲ್ಲಾಗಲಿ ಮಂಜೂರಿ ಬಗ್ಯೆ ತಿಳಿಸಬಹುದು

ನಡವಳಿಕೆಗಳ ಕಚ್ಚಾ ಸಾರಾಂಶವನ್ನು ಬಂದು ಬೈಂಡಾದ ಪುಸ್ತಕದಲ್ಲಿ ಬರೆದುಕೊಳ್ಳಬೇಕು

28 ಮಿಾಟಿಂಗುಗಳಲ್ಲಿ ನಡೆಯುವ ನಡವಳಿಕೆಗಳ ಕಚ್ಚಾ ಸಾರಾಂಶಗಳನ್ನು ಚರ್ಚೆ ನಡೆದ ತಾವಲ್ಲಿ ಬಂದು ಬೈಂಡು ಮಾಡಲ್ಪಟ್ಟ ಪುಸ್ತಕದಲ್ಲಿ ಬರೆದುಕೊಳ್ಳಬೇಕು

ಮಿಾಟಿಂಗು ಆಜ್ಞರ್ ಮಾಡುವ ಆಂಥಾ ಕೆಲವು ಕಾಲಮಟ್ಟಿಗ ನಿಲ್ಲಿಸತಕ್ಕ ವಿಷಯದಲ್ಲಿ ಸಲಹೆ

29 ಬಂದು ಮಿಾಟಿಂಗನ್ನು ಆಜ್ಞರ್ ಮಾಡತಕ್ಕ ಬಗ್ಯೆ ಎದವಾ ಬಂದು ವಿಷಯದ ಪರ್ಯಾಲೋಚನೆಯನ್ನು ಸ್ವಲ್ಪಕಾಲದ ವರೆಗ ನಿಲ್ಲಿಸತಕ್ಕ ಬಗ್ಯೆ ಮಾಡ್ಪಡುವ ಸೂಚನೆಯನ್ನು ಸದರಿ ಮಿಾಟಿಂಗಿನಲ್ಲಿ ತರಲ್ಪಟ್ಟು ಇತರ ಸೂಚನೆಗಳಿಗಿಂತಲೂ ಮುಂಚಿತವಾಗಿ ಆಲೋಚನೆಗ ತಗೆದುಕೊಳ್ಳತಕ್ಕದ್ದು

ಮಿಾಟಿಂಗುಗಳು ಸಾಧಾರಣವಾಗಿ ಜನ ಸಾಮಾನ್ಯಕ್ಕೆ ಖುಲ್ಲಾ ಇರಬೇಕು

30 ಎಲ್ಲಾ ಮಿಾಟಿಂಗುಗಳೂ ಜನಸಾಮಾನ್ಯಕ್ಕ ಖುಲ್ಲಾ ಇರಬೇಕು. ಪರಂತು ಮ್ಯುನಿಸಿಪಲ್ ಕೌನ್ಸಿಲ್ ಸಭೆಯಲ್ಲ ಎಚಾರಣೆಯಲ್ಲಿ ಲಭವಾ ಆತ್ಮೋಚನೆಯಲ್ಲಿ ಇಟ್ಟುಕೊಂಡಿರುವ ವಿಷಯವನ್ನು ಗೋಪ್ಯವಾಗಿ ಆಲೋಚಿಸತಕ್ಕದ್ದು ಅವಶ್ಯಕವೆಂದು ಸಭಾಧ್ಯಕ್ಷರಿಗ ತೋರಿದರೆ ಇತರ ಜನರನ್ನು ಮಿಾಟಿಂಗಿನಿಂದ ಹೊರಗ ಹಾಗಬೇಕೆಂದು ತಿಳಿಸಬಹುದು. ಸಭಾಧ್ಯಕ್ಷರು ಸದರಿ ಮಿಾಟಿಂಗಿನ ನಡವಳಿಕೆಗಳಿಗ ಎಚರಣೆಯನ್ನುಂಟುಮಾಡಿಹಾಯುವ ಮನುಷ್ಯನನ್ನಾದರೂ ಯಾವ ಕಾಲವಲ್ಲಾಗಲಿ ಆಚೆಗೆ ಕಳಿಸಬಹುದು

GPB—300—13-1-1

Rules of the Channapatna Municipal

ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗುಗಳಲ್ಲಿ ನಡೆಸಬೇಕಾದ ಕೆಲಸಗಳನ್ನು ಮತ್ತು ನಡೆಯ ಳಿಕೆಗಳನ್ನು ಕ್ರಮಪಡಿಸತಕ್ಕ ಬಗ್ಗೆ ವಿಧಿಸೋಣಾದ ನಿಬಂಧನೆಗಳು.

ಮೀಟಿಂಗ್ ಮಾಡತಕ್ಕ ಸ್ಥಳ

ಫಲಾನೆ ಸ್ಥಳದಲ್ಲಿ ಮೀಟಿಂಗ್ ನೇಂಬೇಕೆಂದು ಕಾರಣಗಳನ್ನು ನಮೂ ದಿಸಿ ನೋಟೀಸು ಕೊಟ್ಟು ವಿನಾ ಇತರ ಸಂದರ್ಭಗಳಲ್ಲೆಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳ ಮೀಟಿಂಗುಗಳು ಮ್ಯುನಿಸಿಪಲ್ ಆಫೀಸಿನಲ್ಲಿಯೇ ನಡೆಯಬೇ ಕು ಪ್ರತಿ ತಿಂಗಳ ಅಬ್ಜೆಕ್ಟು ನೆ ವಾರದ ದಿವಸ ಬೆಳಗ್ಯೆ 8ಘಂಟೆ ಸಮು ಯದಲ್ಲಿ ಅಥವಾ ಪ್ರೆಸಿಡೆಂಟರಿಗೆ ಸೂಕ್ತ ಕಾಣುವ ಇತರ ದಿವಸ ಮತ್ತು ಕಾ ಲದಲ್ಲಿ ಸಾಮಾನ್ಯವಾಗಿ ಮೀಟಿಂಗುಗಳನ್ನು ನಡೆಸತಕ್ಕದ್ದು

ಮೀಟಿಂಗ್ ಯಾ ಸಭೆ ನೇರತಕ್ಕ ಬಗ್ಗೆ ನಿಷ್ಕರ್ಷೆಯಾದ ಸಮಯದಲ್ಲಿ ಕಾರ್ಯನಿರ್ವಾಹದ ಬಗ್ಗೆ ಕನಿಷ್ಠ ಪಕ್ಷ ಎಷ್ಟು ಜನ ಕೌನ್ಸಿಲರುಗಳು ಇರಬೇಕೆಂದು ಕ್ಲುಪ್ತವಾಗಿರುತ್ತದೆಯೋ ಅಷ್ಟು ಜನ ಹಾಜರಿದ್ದ ಪಕ್ಷದಲ್ಲಿ ಮೀಟಿಂಗು ನಡೆಸಬೇಕು

2 (a) ಕೌನ್ಸಿಲರುಗಳು ಮೀಟಿಂಗು ಯಾ ಸಭೆಯ ಬಗ್ಗೆ ನೇರ ಬೇಕೆಂದು ನಿಷ್ಕರ್ಷೆಯಾದ ಸಮಯದಲ್ಲಿ, ಕಾರ್ಯನಿರ್ವಾಹದ ಬಗ್ಗೆ ಕನಿಷ್ಠ ಪಕ್ಷ ಎಷ್ಟು ಜನ ಕೌನ್ಸಿಲರುಗಳು ಹಾಜರಿರಬೇಕೆಂದು ಕ್ಲುಪ್ತವಾಗಿರುತ್ತದೆಯೋ ಅಷ್ಟು ಜನ ಹಾಜರಿದ್ದ ಪಕ್ಷದಲ್ಲಿ, ಮೀಟಿಂಗಿಗೆ ಸಂಬಂಧಪಟ್ಟ ಕೆಲ ಸವನ್ನು ಕೂಡಲೆ ಪ್ರಾರಂಭಿಸತಕ್ಕದ್ದು ಪ್ರೆಸಿಡೆಂಟರವರು, ವೈಸ ಪ್ರೆಸಿಡೆಂಟರವರು ಈ ಉಭಯತ್ರರು ಗೈರು ಹಾಜರಾಗಿದ್ದ ಪಕ್ಷದಲ್ಲಿ, 26 (5) ನೆ ಪ್ರಕರಣದ ಮೇರೆಗೆ ಕೌನ್ಸಿಲರುಗಳು ತಮ್ಮಿ ಬೈಕಿ ಒಬ್ಬರನ್ನು ಸಭಾ ಧ್ಯಕ್ಷರನ್ನಾಗಿ ಕೂಡಲೆ ಚುನಾಯಿಸಬೇಕು. ಈ ರೀತಿ ಸಭಾಧ್ಯಕ್ಷರನ್ನು ಕೌನ್ಸಿಲರುಗಳು ಚುನಾಯಿಸಿದನಂತರ ಪ್ರೆಸಿಡೆಂಟರಾಗಲಿ ವೈಸ ಪ್ರೆಸಿಡೆಂಟರಾಗಲಿ ಹಾಜರಾದಲ್ಲಿ, ಹಾಗೆ ಚುನಾಯಿಸಲ್ಪಟ್ಟ ಕೌನ್ಸಿಲರು ಸಭಾಧ್ಯಕ್ಷರ ಸ್ಥಾನವನ್ನು ಬಿಟ್ಟುಕೊಡತಕ್ಕದ್ದು ಅನಂತರ ಪ್ರೆಸಿಡೆಂಟರಾಗಲಿ ಅಥವಾ ವೈಸ ಪ್ರೆಸಿಡೆಂಟರಾಗಲಿ ಸಭಾಧ್ಯಕ್ಷರಾಗತಕ್ಕದ್ದು

ಮೀಟಿಂಗ್ ನೇರತಕ್ಕ ಬಗ್ಗೆ ನಿಷ್ಕರ್ಷೆಯಾದ ಸಮಯದಲ್ಲಿ, ಕನಿಷ್ಠ ಸಂಖ್ಯೆಯ ಕೌನ್ಸಿಲರುಗಳು ಹಾಜರಿಲ್ಲದೆ ಹೋದರೆ

(b) ಮೀಟಿಂಗ್ ಯಾ ಸಭೆ ನೇರತಕ್ಕ ಬಗ್ಗೆ ಗೊತ್ತಾದ ಸಮೆದು ದಲ್ಲಿ ಕಾರ್ಯನಿರ್ವಾಹದ ಬಗ್ಗೆ ಕನಿಷ್ಠ ಪಕ್ಷ ಗೊತ್ತಾದಷ್ಟು ಜನ ಕೌನ್ಸಿಲರು ಗಳು ಬಾರದೆ ಇದ್ದ ಪಕ್ಷದಲ್ಲಿ, ಸಭಾಧ್ಯಕ್ಷರಾದವರು ಸದರಿ ಸಭೆಯನ್ನು ಅಧ್ಜರ್ಗ ಮಾಡುವದಕ್ಕೆ ಮುಂಚೆ, 30 ನಿಮಿಷ ಕಾಲ ನಿರೀಕ್ಷಿಸಿ, ಮೀಟಿಂಗ್ ಸೇರುವದಕ್ಕೆ ಗೊತ್ತಾದ ಕಾಲದ ಆಗಾಯಿತು 30 ನಿಮಿಷದವರೆಗೂ ಕಾರ್ಯನಿರ್ವಾಹದ ಬಗ್ಗೆ ಬೇಕಾದಷ್ಟು ಜನ ಕೌನ್ಸಿಲರುಗಳು ಬಾರದೆ ಇದ್ದರೆ ಸದರಿ ಮೀಟಿಂಗ್ ಯಾ ಸಭೆಯನ್ನು ಮುಂದಿನ ವಾರದ ಅದೇ ದಿನ, ಅದೇ ಕಾಲ ಮತ್ತು ಅದೇ ಸ್ಥಳದಲ್ಲಿ ನಡೆಸಲು ಅಧ್ಜರ್ಗ ಮಾಡತಕ್ಕದ್ದು

ಕಾರ್ಯ ಉಪಕ್ರಮವಾದ ನಂತರ ಕ್ಲುಪ್ತಸಂಖ್ಯೆಯ ಕೌನ್ಸಿಲರುಗಳು ಇಲ್ಲದೆ ಇದ್ದರೆ

(c) ಕಾರ್ಯ ಉಪಕ್ರಮವಾದ ಮೇಲೆ ಸಭಾಕಾರ್ಯನಿರ್ವಾಹಕ್ಕೆ ಕ್ಲುಪ್ತವಾದ ಸಂಖ್ಯೆಯ ಕೌನ್ಸಿಲರುಗಳು ಹಾಜರಿಲ್ಲವೆಂದು ಸಭಾಧ್ಯಕ್ಷರಿಗೆ ಕಂಡು ಬಂದರೂ, ಅಥವಾ ಅಂಥಾ ಸಂಗತಿಯನ್ನು ಸಭಾಧ್ಯಕ್ಷರ ತಿಳಿವಳಿಕೆಗೆ ಯಾವ ಕೌನ್ಸಿಲರಾದರೂ ತಂದರೂ ತಕ್ಷಣವೇ ಸಭಾಧ್ಯಕ್ಷರು ನಡೆಸುತ್ತಿದ್ದ ಕೆಲಸವನ್ನು ನಿಲ್ಲಿಸಿ, ಹಾಜರಿರುವ ಕೌನ್ಸಿಲರುಗಳನ್ನು ಎಣಿಸತಕ್ಕದ್ದು, ಮತ್ತು ಹಾಗೆ ಎಣಿಸಲ್ಪಟ್ಟ ಸಂಖ್ಯೆಯು ಕಾರ್ಯನಿರ್ವಾಹ ಬಗ್ಗೆ

ಗೊತ್ತಾದ ಸಂಖ್ಯೆಗಿಂತಲೂ ಕಮ್ಮಿಯಾಗಿದ್ದಲ್ಲಿ, ಸದರಿ ಸಭಾಧ್ಯಕ್ಷರು ಮಿತಿ ಟಿಂಗನ್ನು ಅಷ್ಟರ್ ಮಾಡಬಹುದು

ಮಿನಿಟ್ ಯಾ ಚರ್ಚಿಸಬೇಕಾದ ವಿಷಯಗಳ ಕೊಪ್ಪಾರೆಯ ತಿದ್ದುಪಾಟು

3 ಹಾಜರಿರುವ ಯಾವ ಕೌನ್ಸಿಲಾದರೂ, ಚರ್ಚಿಸಬೇಕಾದ ವಿಷಯಗಳನ್ನು ತಪ್ಪಾಗಿ ಓರೆದುಕೊಂಡಿರುತ್ತೆಂದಾಗಲಿ ಅಥವಾ ಸಂಪೂರ್ಣವಾಗಿ ಓರೆದುಕೊಂಡು ಇರುವುದಿಲ್ಲವೆಂದಾಗಲಿ ಹೇಳಿದರೆ, ಸಭಾಧ್ಯಕ್ಷರು ಹಾಜರಿರುವ ಮೆಂಬರುಗಳ ಅಭಿಪ್ರಾಯವನ್ನು ತಿಳಿದುಕೊಂಡು ತಮಗೆ ಸರಿಯೆಂದು ತೋರುವಂಥಾ ಬದಲಾವಣೆಗಳನ್ನು ಮಾಡಬಹುದು ಹಾಗೆ ತಿದ್ದುಪಾಟಾದ ಮಿನಿಟ್ ಯಾ ಸಂಗ್ರಹವನ್ನು ಮಂಜೂರ್ ಮಾಡಿ, ಆದಕ್ಕೆ ಸಭಾಧ್ಯಕ್ಷರು ರುಜು ಹಾಕಬೇಕು.

ಚರ್ಚೆ ನಡೆಸುವಲ್ಲಿ ಅನುಸರಿಸಬೇಕಾದ ಕ್ರಮ

4 ಮಾತಾಡಬೇಕೆಂದು ಅಪೇಕ್ಷಿಸುವ ಕೌನ್ಸಿಲರು ತಮ್ಮ ಸ್ಥಾನದಲ್ಲಿ ಎದ್ದು ನಿಂತುಕೊಳ್ಳಬೇಕು ಹಾಗೆ ಯಾವ ಕೌನ್ಸಿಲರು ಮೊದಲು ಎದ್ದು ನಿಂತುಕೊಳ್ಳುವರೋ ಅವರೇ ಮೊದಲು ಮಾತಾಡಬೇಕು ಈ ವಿಷಯದಲ್ಲಿ ಏನಾದರೂ ಸಂದೇಹ ಬಂದರೆ, ಸಭಾಧ್ಯಕ್ಷರು ಫಲಾನೆಯವರೇ ಮೊದಲು ಮಾತಾಡತಕ್ಕದ್ದೆಂಬುದನ್ನು ನಿಶ್ಚಯಿಸಬೇಕು. ಯಾವ ಕೌನ್ಸಿಲರಾದರೂ ಮಾತಾಡುತ್ತಿದ್ದರೆ, ಅದನ್ನು ಯಾರು ಅಡಿಂಚಪಡಿಸಕೂಡದು , ಆದರೆ ಸಭಾಧ್ಯಕ್ಷರು ಕ್ರಮ ತಪ್ಪಿ ಮಾತನಾಡಕೂಡದೆಂದು ಹೇಳಬಹುದು, ಮತ್ತು ಯಾರಾದರೂ ಒಬ್ಬ ಕೌನ್ಸಿಲರು ಕ್ರಮ ತಪ್ಪಿ ಮಾತನಾಡಿದರೆ ಅವರನ್ನು ಕ್ರಮ ಪ್ರಕಾರ ಮಾತನಾಡುವಂತೆ ಮಾಡಬೇಕೆಂದಾಗಲಿ ಅಥವಾ ಸಭಾಕಾರ್ಯನಿರ್ವಾಹಕ್ಕೆ ಬೇಕಾದಷ್ಟು ಜನ ಕೌನ್ಸಿಲರುಗಳು ಇಲ್ಲವೆಂತಲಾಗಲಿ ಇತರ ಕೌನ್ಸಿಲರುಗಳು ತಿಳಿಸಬಹುದು

4A. ಮಿಟಿಂಗಿಗೆ ಸಂಬಂಧಪಟ್ಟ ಕಾರ್ಯಗಳ ವಿಷಯದಲ್ಲಿ ಒಬ್ಬ ಕೌನ್ಸಿಲರು ಮತ್ತೊಬ್ಬ ಕೌನ್ಸಿಲರನ್ನು ಪ್ರಶ್ನೆ ಮಾಡಬೇಕಾಗಿ ಬಂದರೆ ಅಂಥಾ ಪ್ರಶ್ನೆಯನ್ನು ಸಭಾಧ್ಯಕ್ಷರ ಮುಖಾಂತರ ಕೇಳಬೇಕು

ಕ್ರಮ

5 ಸಭಾಧ್ಯಕ್ಷರು ಸಭೆಯು ಕ್ರಮಾತಿಕ್ರಮಣವಿಲ್ಲದಂತೆ ನೋಡಿಕೊಳ್ಳಬೇಕು ಮತ್ತು ಇಂತಿಂಥಾ ಸಂದರ್ಭದಲ್ಲಿ ಇಂತಿಂಥಾ ಕ್ರಮವನ್ನೇ ಅನುಸರಿಸಬೇಕೆಂಬುವುದನ್ನು ಅವರು ಕೂಡಲೆ ನಿರ್ಧರಿಸಬೇಕು ಅದರ ಮೇಲೆ ಯಾವ ಚರ್ಚೆಯನ್ನು ಮಾಡುವುದಕ್ಕೂ ಅವಕಾಶಕೊಡಕೂಡದು. ಆದರೆ ಹಾಜರಿರುವ ಕೌನ್ಸಿಲರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳತಕ್ಕದ್ದು ಅವಶ್ಯಕವೆಂದು ಸಭಾಧ್ಯಕ್ಷರಿಗೆ ತೋರಿದರೆ ಅಂಥಾ ಸಂದರ್ಭದಲ್ಲಿ ಮಾತ್ರ ಚರ್ಚೆಗೆ ಅವಕಾಶ ಕೊಡಬಹುದಾಗಿರುತ್ತೆ. ಕ್ರಮವಿಂಥಾದ್ದೆಂಬ ಅಂಶದಲ್ಲಿ ಸಭಾಧ್ಯಕ್ಷರು ಮಾಡಿರುವ ತೀರ್ಮಾನದಂತೆ ನಡೆಯಲು ಸಭೆಯುವೆರು ತಿರಸ್ಕರಿಸಿದರೆ, ಅಂಥಾ ಸಭೆ ಯಾ ಮಿಟಿಂಗನ್ನು ಸಭಾಧ್ಯಕ್ಷರು ಮುಂದಕ್ಕೆ ಅಷ್ಟರ್ ಮಾಡಬಹುದು

ಮಾತನಾಡಕೂಡದೆಂದು ನಿಷೇಧಿಸಲ್ಪಟ್ಟ ಕೌನ್ಸಿಲರು ತಮ್ಮ ಸ್ಥಾನದಲ್ಲಿ ಕೂತುಕೊಳ್ಳಬೇಕು

5A ಮಾತಾಡಕೂಡದೆಂದು ಸಭಾಧ್ಯಕ್ಷರಿಂದ ಹೇಳಿಸಿಕೊಂಡಂಥಾ ಕೌನ್ಸಿಲರು ಕ್ರಮದ ವಿಷಯದಲ್ಲಿ ಉಂಟಾಗಿರುವ ಸಂಕಯವು ವ್ಯವಸ್ಥೆಯಾಗುವವರೆಗೂ ಕೂತುಕೊಳ್ಳಬೇಕು ಪರಂತು ಸಭಾಧ್ಯಕ್ಷರು ಈ ವಿಷಯದಲ್ಲಿ ಮಾತಾಡಲು ಸದರಿ ಕೌನ್ಸಿಲರಿಗೆ ಅವಕಾಶ ಕೊಡಬಹುದು ಸಭಾಧ್ಯಕ್ಷರ ತೀರ್ಮಾನದ ಮೇಲೆ ವಿವಾದಿಸಬೇಕೆಂಬ ಅಭಿಲಾಷವುಳ್ಳ ಕೌನ್ಸಿಲರು ಮುಂದಿನ ಮಿಟಿಂಗಿನಲ್ಲಿ ಈ ವಿಷಯದಲ್ಲಿ ಒಂದು ಸೂಚನೆಯನ್ನು ತರಬಹುದು

ಮಿಟಿಂಗಿಗೆ ಸಂಬಂಧಪಟ್ಟ ಯಾವುದಾದರೂ ಒಂದು ವಿಷಯವನ್ನು ಇತರ ವಿಷಯಗಳಿಗಿಂತಲೂ ಮುಂಚಿತವಾಗಿಯೇ ಚರ್ಚಿಸಬಹುದು

6 ಮಾಡಬೇಕಾದ ಕಾರ್ಯಗಳನ್ನು ಯಾವ ಕ್ರಮದಲ್ಲಿ ನಡೆಸಬೇಕೆಂಬುವ ವಿಷಯವನ್ನಾಗಲಿ ಅಥವಾ ಮಿಟಿಂಗಿನಲ್ಲಿ ಚರ್ಚಿಸಬೇಕಾದ ಯಾವ ಸೂಚನೆಯನ್ನು ಸದರಿ ಮಿಟಿಂಗಿನಲ್ಲಿ ಯಾವ ಕ್ರಮವನ್ನನುಸರಿಸಿ ಚರ್ಚಿಸಬೇಕೆಂಬುವುದನ್ನಾಗಲಿ ಸಭಾಧ್ಯಕ್ಷರು ನಿಶ್ಚಯಿಸಬೇಕು. ಈ ವಿಷಯ ಯಾವು

ದಾದರೂ ಒಂದು ಕಾರ್ಯಕ್ಕಾಗಿ ಅಥವಾ ಯಾವುದಾದರೂ ಒಂದು ಸಮಸ್ಯೆಯ ಕ್ಕಾಗಿ ಇತರ ಕಾರ್ಯಗಳಿಗಿಂತಲೂ ಮುಂಚಿತವಾಗಿ ಚರ್ಚಿಸಬೇಕೆಂದು ಒತ್ತಾಯ ಮಾಡುವ ಸಭೆ ಕರೆಯಬಹುದಾಗಿದ್ದರೆ, ಆಂಥಾ ಸಭೆಯನ್ನು ಸಭಾಧ್ಯಕ್ಷರು ನಿರ್ಬಂಧಿಸಿದಲ್ಲಿರುವ ಮೊದಲಿನ ಆಧಿಕಾರವನ್ನು ಕೈಬಿಟ್ಟು, ಸದರಿ ಸಭೆಯು ಪರವಾಗಿ ಅಥವಾ ಅದಕ್ಕೆ ವಿರೋಧವಾಗಿ ಕೊಡಬೇಕಾದ ಹಿಷ್ಟು ಮೊದಲಿನಂತೆಯೇ ಇರಬೇಕು.

ಒಂದೇ ವಿಷಯಕ್ಕೆ ಸಂಬಂಧಪಟ್ಟ ಒಟ್ಟು ಅನೇಕ ಅಂಗಗಳನ್ನು ಒಟ್ಟಾಗಿ ಸೇರಿಸಬೇಕು

7 ಒಂದೇ ವಿಧದಲ್ಲಿ ಒಂದಕ್ಕಿಂತಲೂ ಹೆಚ್ಚು ನಿರ್ಣಯಗಳನ್ನು ಪ್ರಸ್ತಾಪಿಸಲು, ಒಂದೇ ವಿಷಯಕ್ಕೆ ಸಂಬಂಧಪಟ್ಟ ಎರಡು ಅಥವಾ ಹೆಚ್ಚಿನ ಅಂಗಗಳ ಜೊತೆಗೆ ಒಂದು ನಿರ್ಣಯಕ್ಕೆ ಸಂಬಂಧಪಟ್ಟಿಲ್ಲದ ಮತ್ತೆ ಕೆಲವು ಅಂಗಗಳನ್ನು ಸೇರಿಸಿ ಒಂದೇ ನಿರ್ಣಯವಾಗಿ ಮಂಡಿಸಲು ಅವಕಾಶವಿರುವುದಿಲ್ಲ. ಆದರೆ ಸಂಬಂಧಪಟ್ಟಿಲ್ಲದ ಅಂಗಗಳನ್ನು ಸೇರಿಸಿ ಒಂದೇ ನಿರ್ಣಯವಾಗಿ ಮಂಡಿಸಿದ್ದಲ್ಲಿ ಅಂಥಾ ಸಂದರ್ಭದಲ್ಲಿ ಹಾಜರಾಗಿರುವ ಕೌನ್ಸಿಲರುಗಳ ಸಮ್ಮತಿಯನ್ನು ಪಡೆದು ಸಭಾಧ್ಯಕ್ಷರು ಆಯಾಗಳನ್ನೆಲ್ಲಾ ಒಂದೇ ವಿಷಯವಾಗಿ ಭಾವಿಸಿ ಒಂದು ನಿರ್ಣಯದಲ್ಲಿ ಪಳಕಾಬದ್ಧಿಯೇ ಆಲೋಚನೆಯಿಂದ ಫೈಸಲಾಗಬಹುದಾದ ಬಗ್ಗೆ ಇಟ್ಟು ಕೊಳ್ಳಬಹುದು.

ಒಂದು ಸಲಹೆಯನ್ನು ವಿಭಾಗಿಸಬಹುದು.

8 ಯಾವುದಾದರೂ ಒಂದು ಸಲಹೆಯಾಗಲಿ ಅಥವಾ ತಿದ್ದುಪಾಟಾಗಲಿ ಸ್ಪಷ್ಟವಾಗಿಲ್ಲದೆ ಇನ್ನೊಂದರಿಂದ, ಒಂದೇ ಸಲಹೆಯಾಗಿ ಚರ್ಚಿಸಿದ್ದಲ್ಲಿ ಹೊಂದರಿಗೂ ಸಂದೇಹಕ್ಕೂ ಆಸ್ಪಾದವಾಗುತ್ತದೆಂಬುದಾಗಿ ತಮ್ಮ ಕೋರಿದರೆ ಆಂಥಾ ಸಭೆ ಯಾ ತಿದ್ದುಪಾಟನ್ನು ಎರಡು ಅಥವಾ ಇದಕ್ಕೆ ಹೆಚ್ಚಾದ ಸಂಖ್ಯೆಯ ಸಲಹೆಗಳಾಗಿ ವಿಭಾಗಿಸುವುದಕ್ಕೆ ಸಭಾಧ್ಯಕ್ಷರು ಅಧಿಕಾರವುಳ್ಳವರಾಗಿರುತ್ತಾರೆ

ವಿಭಾಗಿಸಲ್ಪಟ್ಟ ಒಂದು ಸಲಹೆಯು ಒಂದಾವರ್ತಿಗಿಂತಲೂ ಚರ್ಚಿಸಿ ಪ್ರಸ್ತಾಪಿಸಲ್ಪಡಲೇಕಾಗಿಯೂ ಅನುಮತಿಸಲ್ಪಡಲೇಕಾಗಿಯೂ ಇರುವುದಿಲ್ಲ.

ಆದರೆ ಈ ನಿಬಂಧನೆಯನ್ನು ಸಡಿಲಿಸಿ ಒಂದು ಸಲಹೆ ಅಥವಾ ಒಂದು ತಿದ್ದುಪಾಟು ವಿಭಾಗಿಸಲ್ಪಟ್ಟಿಲ್ಲದೆ, ಹಾಗೆ ವಿಭಾಗಿಸಲ್ಪಟ್ಟ ಎರಡನೆ ಅಥವಾ ಆದರ ತರುವಾಯದ ಭಾಗಗಳು, ಸಭಾಧ್ಯಕ್ಷರು ಅನ್ಯಥಾ ತೀರ್ಮಾನಿಸಿದ ಹೊರತು, ಪ್ರತ್ಯೇಕವಾಗಿ ಮೊತ್ತೊಂದಾವರ್ತಿ ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಡಲೇಕಾಗಿಯೂ ಅನುಮೋದಿಸಲ್ಪಡಲೇಕಾಗಿಯೂ ಇರುತ್ತದೆ. ಆದರೆ ಸಭಾಧ್ಯಕ್ಷರು ಹಾಗೆ ವಿಭಾಗಿಸಲ್ಪಟ್ಟ ಸಲಹೆಯ ಪ್ರತಿ ಒಂದು ಭಾಗವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಒಂದಾದ ಮೇಲೆ ಮತ್ತೊಂದರ ಪ್ರಕಾರ ತೀರ್ಮಾನಿಸೋಣವೆಂದು ಆಜ್ಞೆಗಳ ವಿಷಯದಲ್ಲಿ ಕೌನ್ಸಿಲರುಗಳ ನೋಡಿಕೆಯ ಸಮ್ಮತಿಯನ್ನು ಕೇಳಬೇಕು.

ವಿಭಾಗಿಸಲ್ಪಟ್ಟಿಲ್ಲದಿರುವ ವಿಷಯಕ್ಕೆ ಸರಿಯಾದ ಸಲಹೆಯನು ಸಂಬಂಧಿಸಿದ್ದಾಗಿರಬೇಕು

9 ಮೊತ್ತಾವಣೆಯೆಂದು ಏನಾದರೆ ಪ್ರತಿ ಒಬ್ಬ ಕೌನ್ಸಿಲರೂ ವಿಭಾಗಿಸಲ್ಪಟ್ಟಿಲ್ಲದೆ ಚರ್ಚೆಯಾಗುತ್ತಿರುವ ವಿಷಯವನ್ನು ಸ್ಪಷ್ಟವಾಗಿ, ಅಥವಾ ತಾವು ಉದ್ದೇಶಿಸಿದ ತಿದ್ದುಪಾಟನ್ನು ಸ್ಪಷ್ಟವಾಗಿ, ಅಥವಾ ಚರ್ಚೆಯ ಕ್ರಮದ ವಿಷಯವನ್ನು ಸ್ಪಷ್ಟವಾಗಿ ಮೊತ್ತಾವಣೆಯಲ್ಲಿಡತಕ್ಕದ್ದು, ಮತ್ತು ತಾವಿರುವ ಸ್ಥಳದಿಂದಲೇ ಯಾವಾಗಲ್ಯಾ ಸಭಾಧ್ಯಕ್ಷರಿಗೆ ಕೇಳಬೇಕು. ಒಂದು ಸಲಹೆಯ ಅಥವಾ ತಿದ್ದುಪಾಟಿನ ವಿಷಯದಲ್ಲಿ ಕೌನ್ಸಿಲರು ತಾವು ಪೇಳಬೇಕಾದ್ದನ್ನು ಒಂದಾವರ್ತಿ ಕೇಳಿದ ನಂತರ ಪುನಃ ಅದೇ ಸಲಹೆಯ ಅಥವಾ ತಿದ್ದುಪಾಟಿನ ವಿಷಯದಲ್ಲಿ ಮೊತ್ತಾವಣೆಯಾಗಬಾರದು

ಪದೇಪದೇ ಒಬ್ಬ ಕೌನ್ಸಿಲರು ಒಂದು ಸಲಹೆ ಅಥವಾ ಪ್ರಮಾಣೀಯನ್ನು ಸೂಚಿಸಿದ ಮೇಲೆ, ಅದೇ ವಿಷಯವಾಗಿ ಮೊತ್ತಾವಣೆಯಲ್ಲಿಡಲು ಆಕ್ಷೇಪಣೆ ಇತರ ಕೌನ್ಸಿಲರು ಯಾರೂ ಮೊತ್ತಾವಣೆಯಲ್ಲಿಡಲಿಲ್ಲವೆಂದು ಸಭಾಧ್ಯಕ್ಷರು ತಿಳಿಸಿದ ತರುವಾಯ, ಪುನಃ ಆದೇ ಕೌನ್ಸಿಲರು ಆದೇ ವಿಷಯದಲ್ಲಿ ಏನಾ ಆಗಿ ಮೊತ್ತಾವಣೆ ಆರಂಭಿಸಿರುತ್ತಾರೆ

ಅಲ್ಲದೆ, ಯಾವ ಕೌನ್ಸಿಲರಾದರೂ ಒಂದು ಸಲಹೆಯನ್ನಾಗಲಿ ಅಥವಾ ತಿದ್ದುಪಾಟನ್ನಾಗಲಿ "ನಾನು ಈ ಸಲಹೆಯನ್ನು ಅಥವಾ ತಿದ್ದುಪಾಟನ್ನು

ಅನುಮೋದಿಸುತ್ತೇನೆ " ಎಂಬುದಾಗಿ ಹೇಳುವುದರ ಮೂಲಕ ಆ ರೀತಿ ಆದೇಶವನ್ನು ಅನುಮೋದಿಸಬಹುದು. ಮತ್ತು ಇದರ ವಿಚಾರವಾಗಿ ತರುವಾಯ ಮಾತನಾಡುವುದಾಗಿ ಹೇಳಬಹುದು ಇದೂ ಅಲ್ಲದೆ ತಾವು ಅಡಿದ ಮಾತಿನಲ್ಲಿ ತೋರುವ ತಪ್ಪು ಅಭಿಪ್ರಾಯವನ್ನು ಸರಿಯಾಗಿ ವಿವರಿಸಿ ಹೇಳಲು ಅಪೇಕ್ಷಿಸುವ ಕೌನ್ಸಿಲರು ಸಭಾಧ್ಯಕ್ಷರ ಅಪ್ಪಣೆಯನ್ನು ಪಡೆದು ಆರೀತಿ ಮಾಡಬಹುದು.

ವಾಡಿಕೆಯಾದ ತೀರ್ಮಾನಗಳನ್ನು ಒಬ್ಬರಿಂದಲೂ ಪ್ರಸ್ತಾಪಿಸಲ್ಪಡದೆ ಅಥವಾ ಅನುಮೋದಿಸಲ್ಪಡದೆ ಮಿಟಂಗಿನಲ್ಲಿ ಹೇಳಬಹುದು

10 ವಾಡಿಕೆಯಾದ ತೀರ್ಮಾನಗಳು ಎಂದರೆ ಕ್ಲುಪ್ತಕಾಲಗಳಲ್ಲಿ ತಯಾರಿಸಲ್ಪಡುವ ಪಟ್ಟಿಗಳನ್ನು ರಿಕಾರ್ಡು ಮಾಡುವುದು, ಅಥವಾ ಕಮ್ಮಿಟಿಗಳ ನಡವಳಿಕೆಗಳನ್ನು ಮಂಜೂರ್ಮಾಡುವುದು, ಇವುಗಳನ್ನು ಒಬ್ಬರಿಂದಲೂ ಪ್ರಸ್ತಾಪಿಸಲ್ಪಡದೆ ಅಥವಾ ಅನುಮೋದಿಸಲ್ಪಡದೆ ಸಭಾಧ್ಯಕ್ಷರು ವಿಷಯಮಿನಲ್ಲಿ ಇಡಬಹುದು. ಸಭಾಧ್ಯಕ್ಷರನ್ನು ಚುನಾಯಿಸಬೇಕ್ಕ ವಿಷಯದಲ್ಲಿ ಮಾಡಲ್ಪಟ್ಟ ಸಲಹೆ, ಅಡ್ಜರ್ನಮೆಂಟು ಮೋರೆಗಳು ಅನುಮೋದಿಸಲ್ಪಡಬೇಕ್ಕಾದ್ದು, ಆದರೆ ಇವು ಬರಹ ಮೂಲಕ ಇರಬೇಕಾದ್ದಿಲ್ಲವು

ಪ್ರತಿ ಒಂದು ಇತರ ಸಲಹೆಯೂ ಮತ್ತು ತಿದ್ದುಪಾಟೂ ಬರವಣಿಗೆಯಲ್ಲಿ ಇರಬೇಕು ಮತ್ತು ಅನುಮೋದಿಸಲ್ಪಡಬೇಕು

ಮೇಲೆ ವಿವರಿಸಲ್ಪಟ್ಟ ಮೋರೆಗೆ ಅಲ್ಲದೆ ಇತರ ಸಂದರ್ಭಗಳಲ್ಲೆಲ್ಲಾ ಪ್ರತಿ ಒಂದು ಸಲಹೆಯೂ ಮತ್ತು ಪ್ರತಿ ಒಂದು ತಿದ್ದುಪಾಟೂ ಬರವಣಿಗೆಯಲ್ಲಿದ್ದು ಅನುಮೋದಿಸಲ್ಪಡಬೇಕು

ಕಮಿಟಿಗಳ ತೀರ್ಮಾನವು ಒಬ್ಬರಿಂದ ಪ್ರಸ್ತಾಪಿಸಲ್ಪಟ್ಟು ಮತ್ತೊಬ್ಬರಿಂದ ಅನುಮೋದಿಸಲ್ಪಡತಕ್ಕದ್ದು.

ಮ್ಯಾನೇಜಿಂಗ್ ಅಥವಾ ಇತರ ಕಮ್ಮಿಟಿಯ ಒಂದು ತೀರ್ಮಾನವು ಅಂಗೀಕರಿಸತಕ್ಕ ಜನ್ರಲ್ ಮಿಟಿಂಗಿಗೆ ಕಳುಹಿಸಲ್ಪಟ್ಟಾಗ, ಅಂಥಾದ್ದರ ಅಂಗೀಕಾರವು ಸಾಧಾರಣವಾಗಿ ಕಮ್ಮಿಟಿಯ ಮೆಂಬರುಗಳಿಂದ ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಡತಕ್ಕದ್ದು

ತಿದ್ದುಪಾಟುಗಳು,

11 ಸಲಹೆಯು ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಟ್ಟ ನಂತರ ಅದರಮೇಲೆ ತಿದ್ದುಪಾಟಿಗಾಗಿ ಒಬ್ಬ ಕೌನ್ಸಿಲರು ಸಲಹೆಯನ್ನು ಕೊಡಬಹುದು.

ಪರಂತು ಒಂದು ಸಲಹೆಯ ಮೇಲೆ ಒಂದಕ್ಕಿಂತಲೂ ಹೆಚ್ಚಾದ ತಿದ್ದುಪಾಟುಗಳನ್ನು ಯಾವ ಕೌನ್ಸಿಲರೂ ಸೂಚಿಸಕೂಡದು ಆದರೆ ಅಂಥಾ ಸಲಹೆಯು ಬಜೆಟ್ ಯಾ ಜಮಾ ಖರ್ಚು ಅಂದಾಜನ್ನು ಅಥವಾ ಸಾಮಾನ್ಯ ನಿಬಂಧನೆಗಳನ್ನು ಮಂಜೂರ್ಮಾಡುವುದಕ್ಕೆ ಆಲೋಚನೆ ಹೇಳಿದ್ದ ಪಕ್ಷದಲ್ಲೂ ಅಥವಾ ಅದು ನಾನಾ ಭಾಗಗಳಾಗಿ ಅನೇಕ ತಿದ್ದುಪಾಟುಗಳಿಗೆ ಅರ್ಹವಾದುದಾಗಿ ಇದ್ದರೂ, ಅಂಥಾ ಸಂದರ್ಭದಲ್ಲಿ ಅನೇಕ ತಿದ್ದುಪಾಟುಗಳನ್ನು ಸೂಚಿಸಬಹುದು

ಸಭಾಧ್ಯಕ್ಷರು ಸಲಹೆಯನ್ನು ಮಿಟಂಗಿಗೆ ಓದಿ ಹೇಳಬೇಕು

12 ಒಂದು ತಿದ್ದುಪಾಟನ್ನು ಸೂಚಿಸುವವರು ಆ ತಿದ್ದುಪಾಟನ್ನು ಬಾಯಿಂದ ಹೇಳಬೇಕು ಅಥವಾ ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕೂತು ಕೊಳ್ಳುವುದಕ್ಕೆ ಮುಂಚೆಯೇ ಅವರಿಗೆ ಬರಹಮೂಲಕವಾಗಿ ಕೊಡತಕ್ಕದ್ದು. ಒಂದು ಸಲಹೆಯನ್ನು ಅಥವಾ ತಿದ್ದುಪಾಟನ್ನು ಸೂಚಿಸುವವರು ತಮ್ಮ ಸ್ಥಾನದಲ್ಲಿ ಕೂತನಂತರ, ಸಭಾಧ್ಯಕ್ಷರು ಸದರಿ ಸಲಹೆಯನ್ನು ಅಥವಾ ತಿದ್ದುಪಾಟನ್ನು ಮಿಟಂಗಿಗೆ ಓದಿಹೇಳಿ ಆದನ್ನು ಯಾವ ಕೌನ್ಸಿಲರಾದರೂ ಅನುಮೋದಿಸುತ್ತಾರೆಯೇ ಎಂತಾ ಕೇಳಬೇಕು, ಸದರಿ ಸಲಹೆ ಅಥವಾ ತಿದ್ದುಪಾಟನ್ನು ಯಾರಾದರೂ ಅನುಮೋದಿಸಿದ ಹೊರತು ಅದರಮೇಲೆ ಚರ್ಚೆ ಮುಂದುವರಿಕ್ಕೆ ಸಭಾಧ್ಯಕ್ಷರು ಯಾರಿಗೂ ಅಪ್ಪಣೆ ಕೊಡಕೂಡದು ಆ ಸಲಹೆಯನ್ನು ಅಥವಾ ತಿದ್ದುಪಾಟನ್ನು ಯಾವ ಕೌನ್ಸಿಲರೂ ಅನುಮೋದಿಸದೆ ಇದ್ದರೆ, ಸಭಾಧ್ಯಕ್ಷರು ಸದರಿ ಸಲಹೆ ಅಥವಾ ತಿದ್ದುಪಾಟು ನಪ್ಪ್ಯವಾಯಿತೆಂದು ಎಂದರೆ ಆದನ್ನು ಮಂಜೂರ್ಮಾಡುವುದಿಲ್ಲವೆಂದು ತೀರ್ಮಾನಿಸತಕ್ಕದ್ದು

ಉಪನ್ಯಾಸವನ್ನು ಓದತಕ್ಕದ್ದಲ್ಲ

13 ಕೌನ್ಸಿಲರು ತಮ್ಮ ಉಪನ್ಯಾಸವನ್ನು ಓದಕೂಡದು, ಆದರೆ ಜ್ಞಾಪಕಾರ್ಥವಾಗಿ ಬರೆದುಕೊಂಡಿದ್ದ ಟಿಪ್ಪಣಿಯ ನೋಟನ್ನು ನೋಡಬಹುದು ಮತ್ತು ಸಭಾಧ್ಯಕ್ಷನ ಅನುಮತಿಯ ಮೇಲೆ ತಮ್ಮ ಭಾಷಣಕ್ಕೆ ಸಂ

ಬಂಧವಿಟ್ಟ ಮೆಟ್ಟಿಗೆ ಪುಸ್ತಕಗಳಲ್ಲಿ ಅಥವಾ ದಸ್ತ್ಯೆವೇಜುಗಳಲ್ಲಿ ಇರುವ ವಾಕ್ಯಗಳನ್ನು ಓದಬಹುದು.

ಮುಂದಾಗಿ ತಿಳಿಸಲ್ಪಟ್ಟ ಸಲಹೆಯ ವಿಷಯದಲ್ಲಿ ಮೊದಲು ಸಲಹೆ ಕೊಟ್ಟವರು ಗೈರುಹಾಜರಾದರೆ ಅಥವಾ ಅವರಿಗೆ ಇಷ್ಟವಿಲ್ಲದೆ ಇದ್ದರೆ ಮತ್ತಾವ ಕೌನ್ಸಿಲರಾದರೂ ಅಂಥಾ ಸಲಹೆಯನ್ನು ಪ್ರಸ್ತಾಪಿಸಬಹುದು.

14. ಒಂದು ಸಲಹೆಯನ್ನು ಪ್ರಸ್ತಾಪಿಸುವುದಾಗಿ ಒಬ್ಬ ಕೌನ್ಸಿಲರು ಮುಂಚಿತವಾಗಿ ನೋಟೀಸು ಕೊಟ್ಟು ಇದ್ದು ನಂತರ ಅವರು ಮಿಟಿಂಗಿನಲ್ಲಿ ಹಾಜರಿಲ್ಲದೆ ಹೋದರೂ ಅಥವಾ ಮಿಟಿಂಗು ನೇರುವುದಕ್ಕೆ ಮುಂಚೆಯೆ ಅವರಿಗೆ ಕೌನ್ಸಿಲರ್ ಕೆಲಸ ತಪ್ಪಿದರೂ ಅಥವಾ ತಾವು ತಿಳಿಸಿದ್ದ ಸಲಹೆಯನ್ನು ಪ್ರಸ್ತಾಪಿಸುವುದಕ್ಕೆ ಮನಸ್ಸಿಲ್ಲದೆ ಹೋದರೂ, ಮಿಟಿಂಗಿನಲ್ಲಿ ಹಾಜರಿರುವ ಯಾವ ಕೌನ್ಸಿಲರಾದರೂ ಸರಿಯೇ ಸಭಾಧ್ಯಕ್ಷರ ಅನುಮತಿಯನ್ನು ಪಡೆದು ನೋಟೀಸು ಮೂಲಕ ತಿಳಿಸಲ್ಪಟ್ಟ ಸದರಿ ಸಲಹೆಯನ್ನು ಪ್ರಸ್ತಾಪಿಸಬಹುದು.

ಮೊದಲು ಮಾಡಲ್ಪಟ್ಟ ಸಲಹೆಗಳಲ್ಲಿರುವ ಕೆಲವು ಪದಗಳನ್ನು ಬಿಟ್ಟು ಬಿಡುವುದಕ್ಕಾಗಿ ತಿದ್ದುಪಾಟುಗಳು ಸೂಚಿಸಲ್ಪಟ್ಟಿದ್ದಲ್ಲಿ ಅಂಥಾ ತಿದ್ದುಪಾಟುಗಳು ಸ್ಪಷ್ಟವಾಗಿಯೂ ಸರಳವಾಗಿಯೂ ಇರಬೇಕು ಹಿಂಪಡೆಯಲ್ಪಟ್ಟ ಸಲಹೆಗಳ ನಿಷೇಧವಾಕ್ಯಗಳಾಗಿ ಮಾತ್ರ ಇರಕೂಡದು.

15 ಒಂದು ತಿದ್ದುಪಾಟು ಸಾಧಾರಣವಾಗಿ ಒಂದು ಸಲಹೆಯ ರೂಪವಾಗಿದ್ದು ಮೊದಲು ಹೇಳಲ್ಪಟ್ಟ ಸಲಹೆಯಲ್ಲಿ ಕೆಲವು ಪದಗಳನ್ನು ಬಿಟ್ಟುಬಿಡಬೇಕೆಂದಾಗಲಿ ಕೆಲವು ಪದಗಳನ್ನು ಅದರಲ್ಲಿ ಸೇರಿಸಬೇಕೆಂದಾಗಲಿ ಅಥವಾ ಹೊಸಾಗಿ ಕೆಲವು ಪದಗಳನ್ನು ಅದಕ್ಕೆ ಸೇರಿಸಬೇಕೆಂದಾಗಲಿ ತಿಳಿಸತಕ್ಕದ್ದು

ಪ್ರತಿ ಒಂದು ತಿದ್ದುಪಾಟು ಯಾವ ಸಲಹೆಯನ್ನು ತಿದ್ದುವುದಕ್ಕಾಗಿ ಸಲಹೆ ಹೇಳಲ್ಪಡುತ್ತದೆಯೋ ಅಂಥಾ ಸಲಹೆಗೆ ಸಂಬಂಧಪಟ್ಟದ್ದಾಗಿಯೂ ಮತ್ತು ಅದರೊಡನೆ ಓದಿದರೆ ಚೆನ್ನಾಗಿ ತಿಳಿಯುವಂಥಾ ವಾಕ್ಯರಚನೆಯುಳ್ಳದ್ದಾಗಿಯೂ ಇರಬೇಕು. ಸಲಹೆಯನ್ನು ನಿಷೇಧಿಸತಕ್ಕ ಅರಹೆಯಲ್ಲಿ ತರಲ್ಪಡುವ ತಿದ್ದುಪಾಟನ್ನು ಅಂಗೀಕರಿಸತಕ್ಕದ್ದಲ್ಲ

ತಿದ್ದುಪಾಟುಗಳನ್ನು ಮುಂಚಿತವಾಗಿ ಪ್ರೆಸಿಡೆಂಟರಿಗೆ ಕಳುಹಿಸಬಹುದು

16. ಒಂದು ಸಲಹೆಗೆ ತಿದ್ದುಪಾಟನ್ನು ಸೂಚಿಸಬೇಕೆಂದಿರುವ ಕೌನ್ಸಿಲರು ಅಂಥಾ ತಿದ್ದುಪಾಟನ್ನು ಪ್ರೆಸಿಡೆಂಟರಾಗಲಿ ಅಥವಾ ಸಭಾಧ್ಯಕ್ಷರಾಗಲಿ ಖರಹಮೂಲಕವಾಗಿ ಮೊದಲೇ ಕಳುಹಿಸಬಹುದು ಅಥವಾ ಖುದ್ದಾಗಿ ಕೊಡಬಹುದು.

ಒಂದಕ್ಕಿಂತಲೂ ಹೆಚ್ಚಾದ ತಿದ್ದುಪಾಟುಗಳು ಬಂದಲ್ಲಿ ಅವುಗಳನ್ನು ಆಲೋಚಿಸತಕ್ಕ ಕ್ರಮ

17 ಒಂದು ಸಲಹೆಯು ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರಿಗಾಗಲಿ ಅಥವಾ ಸಭಾಧ್ಯಕ್ಷರಿಗಾಗಲಿ ಹೇಳಲ್ಪಟ್ಟ ಯಾ ಕೊಡಲ್ಪಟ್ಟ ಸದರಿ ಸಲಹೆಯ ತಿದ್ದುಪಾಟುಗಳು ಅಂಗೀಕರಿಸಲ್ಪಟ್ಟಲ್ಲಿ ಅವುಗಳು ತಿದ್ದುಪಾಟುದ ಸಲಹೆಯಲ್ಲಿ ಯಾವ ಕ್ರಮವನ್ನು ಅನುಸರಿಸುತ್ತವೆಯೋ ಅದೇ ಕ್ರಮದಲ್ಲಿ ವಿಚಾರಿಸಲ್ಪಡತಕ್ಕದ್ದು, ಅಲ್ಲದೆ ಇನ್ನೂ ಕೆಲವು ತಿದ್ದುಪಾಟುಗಳು ಸಭಾಧ್ಯಕ್ಷರಿಗೆ ಹೇಳಲ್ಪಟ್ಟಲ್ಲಿ ಅಥವಾ ಕೊಡಲ್ಪಟ್ಟಲ್ಲಿ ಅವುಗಳನ್ನು ಅದೇ ಕ್ರಮದಲ್ಲಿ ಸೇರಿಸಿಕೊಳ್ಳತಕ್ಕದ್ದು, ಮತ್ತು ಸಭಾಧ್ಯಕ್ಷರು ತಿದ್ದುಪಾಟುಗಳನ್ನು ಸೂಚಿಸುವವರೆಗೆ ಅದೇ ಕ್ರಮವನ್ನನುಸರಿಸಿ ತಮ್ಮ ತಮ್ಮ ತಿದ್ದುಪಾಟುಗಳನ್ನು ಪ್ರಸ್ತಾಪಿಸಬಹುದೆಂದು ಹೇಳತಕ್ಕದ್ದು

ಒಂದು ತಿದ್ದುಪಾಟಿನ ವಿಷಯವು ಇಷ್ಟಕ್ಕಾಗಲೇ ಮಾಡಿದ ಮೇಲೆ ಮತ್ತೊಂದಕ್ಕೆ ಅವಕಾಶ ಕೊಡಬಾರದು

18 ಒಂದು ತಿದ್ದುಪಾಟಿನ ವಿಷಯವು ಇಷ್ಟಕ್ಕಾಗಲೇ ಮಾಡಿದ ಮೇಲೆಯೇ ಮತ್ತೊಂದನ್ನು ಆಲೋಚನೆಗೆ ತೆಗೆದುಕೊಳ್ಳಬೇಕು ಆದರೆ ಯಾವುದಾದರೂ ಒಂದು ತಿದ್ದುಪಾಟು ಸಲಹೆ ಕೊಡಲ್ಪಟ್ಟು ಅನುಮೋದಿಸಲ್ಪಟ್ಟ ನಂತರ ಯಾವ ಕೌನ್ಸಿಲರಾದರೂ ಅಂಥಾ ತಿದ್ದುಪಾಟಿನಲ್ಲಿ ಕೆಲವು ಪದಗಳನ್ನು ಬಿಟ್ಟು ಬಿಡಬೇಕೆಂದಾಗಲಿ ಸೇರಿಸಬೇಕೆಂದಾಗಲಿ ಸಲಹೆ ಕೊಡಬಹುದು. ಈರೀತಿ ಹೇಳಿದ ಮೇಲೆ ಸಭಾಧ್ಯಕ್ಷರು ಸದರಿ ಸಲಹೆಯನ್ನು ಅನುಮೋದಿಸತಕ್ಕವರು ಯಾರಾದರೂ ಇರುತ್ತಾರೆಯೇ ಎಂದು ಕೇಳಿ, ಹಾಗೆ ಯಾವ ಕೌನ್ಸಿಲರಾದರೂ ಅದನ್ನು ಅನುಮೋದಿಸಿದರೆ, ಅಂಥಾ ತಿದ್ದುಪಾಟಿನಲ್ಲಿ ಬದಲಾವಣೆಯಾಗಬೇಕೆಂಬ ಸಲಹೆಯು ಮಿಟಿಂಗಿನಲ್ಲಿ, ಆಗ ಚರ್ಚಿಸಲ್ಪಡತಕ್ಕ ವಿಷಯವಾಗಿರುತ್ತದೆ

ಹೊಸತೇ ಇತ್ಯರ್ಥವಾದ ತಿದ್ದುಪಾಟಿನ ಪದಗಳ ಬದಲಾವಣೆಯನ್ನು ಮಾಡತಕ್ಕದ್ದಲ್ಲ

19 ಮೊದಲಿನ ಸಲಹೆಯ ಭಾಗವಾಗಿರಕ್ಕದ್ದೆಂದು ಅಥವಾ ಅದಕ್ಕೆ ಹೆಚ್ಚಾಗಿ ಸೇರಿಸತಕ್ಕದ್ದೆಂದು ಮೊದಲೇ ತೀರ್ಮಾನಿಸಲ್ಪಟ್ಟ ಪದಗಳಿಗೆ ಹೆಚ್ಚಾಗಿ ಪದಗಳನ್ನು ಸೇರಿಸಬಹುದೇ ಹೊರತು ಅವುಗಳಿಗೆ ಮತ್ಯಾವ ತಿದ್ದುಪಾಟನ್ನೂ ಮಾಡತಕ್ಕದ್ದಲ್ಲ

ಬಂದಾವರ್ತಿ ನಿರಾಕರಿಸಲ್ಪಟ್ಟ ತಿದ್ದುಪಾಟನ್ನು ಪುನಹಾ ಸಲಹೆ ಕೊಡಕೂಡದು

20 ಮಿಾಟಿಂಗಿನಲ್ಲಿ ನಿರಾಕರಿಸಲ್ಪಟ್ಟ ಸಲಹೆ ಅಥವಾ ತಿದ್ದುಪಾಟಿಗೆ ಸರಿಯಾದ ಸಾರಾಂಶವುಳ್ಳ ಮತ್ತೊಂದು ತಿದ್ದುಪಾಟನ್ನು ಸಲಹೆ ಕೊಡತಕ್ಕದ್ದಲ್ಲ

ಸಲಹೆ ಅಥವಾ ತಿದ್ದುಪಾಟನ್ನು ವಾಪಸು ತೆಗೆದುಕೊಳ್ಳತಕ್ಕದ್ದಲ್ಲ

21 ಪ್ರಸ್ತಾಪಿಸಲ್ಪಟ್ಟ ಅನುಮೋದಿಸಲ್ಪಟ್ಟ ಬಂದು ಸಲಹೆ ಅಥವಾ ತಿದ್ದುಪಾಟನ್ನು ಸಭೆಯವರ ಅಪ್ಪಣೆ ವಿನಾ ವಾಪಸು ತೆಗೆದುಕೊಳ್ಳಕೂಡದು

ಸಭಾಧ್ಯಕ್ಷರು ತಮ್ಮ ಕುರ್ಚಿಯನ್ನು ಬಿಟ್ಟು ಏಳಬೇನೇ ಸಲಹೆಗಳನ್ನು ಹೇಳಬಹುದು

22 ಸಭಾಧ್ಯಕ್ಷರು ತಮ್ಮ ಕುರ್ಚಿಯನ್ನು ಬಿಟ್ಟು ಏಳಬೇನೇ ಸಲಹೆಗಳನ್ನು ಅಥವಾ ತಿದ್ದುಪಾಟುಗಳನ್ನು ಪ್ರಸ್ತಾಪಿಸಬಹುದು, ಅನುಮೋದಿಸಬಹುದು, ಅವುಗಳ ವಿಷಯವಾಗಿ ಮಾತಾಡಬಹುದು ಮತ್ತು ಸಮ್ಮತಿ ಕೊಡಬಹುದು

ವೋಟ್ ಯಾ ಸಮ್ಮತಿ ಕೊಡುವುದು

23 ಬಂದು ಸಲಹೆಯ ವಿಷಯದಲ್ಲಿ ಎಲ್ಲರ ವೋಟು ಯಾ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿ ಬಂದಾಗ, ಸಭಾಧ್ಯಕ್ಷರು ಬೇಕಾದವರು ಕೈ ಎತ್ತುವುದರ ಮೂಲಕ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಹೇಳಬೇಕು ಆಮೇಲೆ ಸದರಿ ಸಭಾಧ್ಯಕ್ಷರು ಅದವಾ ಅವರ ಅಪ್ಪಣೆಮೇರೆಗೆ ಒಬ್ಬ ಕೌನ್ಸಿಲರು ಬಂದು ಸಲಹೆಯ ಪರವಾಗಿ ಅಥವಾ ಅದಕ್ಕ ವಿರೋಧವಾಗಿ ಎತ್ತಲ್ಪಟ್ಟ ಕೈಗಳನ್ನು ಎಣಿಸಿ ಫಲಿತಾಂಶವನ್ನು ಹೇಳತಕ್ಕದ್ದು ಈ ರೀತಿ ಹೇಳಲ್ಪಟ್ಟ ಸಂಖ್ಯೆಯು ಸರಿಯಾದ ಸಂಖ್ಯೆಯಲ್ಲವೆಂದು ಯಾವ ಕೌನ್ಸಿಲರಾದರೂ ಹೇಳಿದರೆ ಕೈಗಳನ್ನು ಎರಡನೆ ದಫಾ ಎಣಿಸತಕ್ಕದ್ದು ಪರಂತು ಯಾರಾದರೂ ಇಬ್ಬರು ಕೌನ್ಸಿಲರುಗಳು ಮೆಂಬರುಗಳ ಹೆಸರನ್ನು ಬರೆದು ಕೊಳ್ಳಬೇಕೆಂದು ಕೇಳಿದರೆ, ಸಭಾಧ್ಯಕ್ಷರು ಕೌನ್ಸಿಲರುಗಳ ಹೆಸರುಗಳನ್ನು ಕೂಗಿ ಬಂದು ಸಲಹೆಯ ಪರವಾಗಿ ಅಥವಾ ಅದಕ್ಕ ವಿರೋಧವಾಗಿ ಸಮ್ಮತಿ ಕೂಡುವ ಕೌನ್ಸಿಲರುಗಳ ಹೆಸರುಗಳನ್ನು ಮಿನಿಟ್ ಯಾ ವಿಷಯ ಸಂಗ್ರಹದಲ್ಲಿ ಬರೆಯಬೇಕು

ಸಭಾಧ್ಯಕ್ಷರು ತಮ್ಮ ವೋಟ್ ಯಾ ಸಮ್ಮತಿಯನ್ನು ಕೂಡುವುದಕ್ಕೆ ಇಷ್ಟವಿಲ್ಲದೆ ಇದ್ದ ಹೊರ್ತು, ಇತರ ಸಂದರ್ಭಗಳಲ್ಲಿ ಬಂದು ವಿಷಯದ ಪರವಾಗಿ ಅಥವಾ ಅದಕ್ಕ ವಿರೋಧವಾಗಿ ಬಂದ ವೋಟ್ ಯಾ ಸಮ್ಮತಿಗಳನ್ನು ತಿಳಿಸುವುದಕ್ಕೆ ಮುಂಚೆಯೇ ತಮ್ಮ ವೋಟು ಯಾ ಸಮ್ಮತಿಯನ್ನು ತಿಳಿಸಬೇಕು ಮತ್ತು ಅದೇ ವಿಷಯದಲ್ಲಿ ಸಮಸಂಖ್ಯೆಯ ಸಮ್ಮತಿಗಳು ಬಂದಲ್ಲಿ ಸಭಾಧ್ಯಕ್ಷರು ಇತ್ಯರ್ಥಾರ್ಹವಾದ ತಮ್ಮ (Casting vote) ಹೆಚ್ಚು ಸಂಖ್ಯೆ ಸಮ್ಮತಿಯನ್ನು ತಿಳಿಸತಕ್ಕದ್ದು

ಯಾವ ಮೆಂಬರನ್ನೂ ವೋಟ್ ಯಾ ಸಮ್ಮತಿ ಕೊಡತಕ್ಕ ವಿಷಯದಲ್ಲಿ ಒಲತ್ಕರ್ಷಿಸಕೂಡದು

24 ಮಿಾಟಿಂಗಿನಲ್ಲಿ ಹಾಜರಿರುವ ಯಾವ ಕೌನ್ಸಿಲರಾದರೂ ತಮ್ಮ ಸಮ್ಮತಿಯನ್ನು ತಿಳಿಸದೆ ಬಿಟ್ಟುಬಿಡಬಹುದು ಮಿಾಟಿಂಗಿನ ಸಮಕ್ಷಮ ತರ್ಪಟ್ಟ ಬಂದು ವಿಷಯವು ಬಂದು ಕಮಿಟಿಯ ರಿಪೋರ್ಟ್‌ನಾಗಲಿ ಅಥವಾ ನಡವಳಿಕಗಳನ್ನಾಗಲಿ ಮೆಂಜೂರ್ಮಾಡತಕ್ಕದ್ದಾಗಿದ್ದರೆ ಆ ಕಮಿಟಿಯ ಮೆಂಬರುಗಳು ತಮ್ಮ ಸಮ್ಮತಿಯನ್ನು ಕೊಡಬಹುದು ಒಬ್ಬ ಕೌನ್ಸಿಲರ ನಡತೆಯ ವಿಷಯದಲ್ಲಿ ಪ್ರಶ್ನೆ ಬಂದಿದ್ದಲ್ಲಿ ಆ ಕೌನ್ಸಿಲರು ಆ ವಿಷಯದಲ್ಲಿ ತಮ್ಮ ವೋಟನ್ನು ಕೂಡಬಹುದು

ಸಮಸಂಖ್ಯೆಯ ವೋಟಿಗಳ ಬಗ್ಗೆ ಯಾ ಸಮ್ಮತಿಗಳ ಫಲಿತಾಂಶ

25 ಸಮಸಂಖ್ಯೆಯ ವೋಟುಗಳು ಯಾ ಸಮ್ಮತಿಗಳು ಕೊಡಲ್ಪಟ್ಟು ಸಭಾಧ್ಯಕ್ಷರು ಇತ್ಯರ್ಥಕ್ಕೆ ಅರ್ಹವಾದ ತಮ್ಮ ಹೆಚ್ಚು ಸಂಖ್ಯೆ ಸಮ್ಮತಿಯನ್ನು ಕೂಡದೆ ಹೋದರೆ, ಅಂಥಾ ಸಲಹೆಯು ಅಂಗೀಕರಿಸಲ್ಪಟ್ಟುದೆಂದಾಗಲಿ ಅದವಾ ತಿರಸ್ಕರಿಸಲ್ಪಟ್ಟುದೆಂದಾಗಲಿ ಜಾವಿಸತಕ್ಕದ್ದಲ್ಲವು ಅದನ್ನು

ಮುಂದೆ ಯಾವ ಮಿಟಿಂಗಿನಲ್ಲಿ ಆದರೂ ಆಲೋಚನೆಗಾಗಿ ತರಬಹುದಾಗಿರುತ್ತದೆ.

ಬಡ್ತಿಯ ಯಾ ಅಂದಾಜು ಜಮೆಯ ಪರಿಶೀಲನೆ ಮಾಡುವ.

26 ಒಂದು ಬಡ್ತಿಯ ಅಥವಾ ರೀ ಅಪ್ರೋಪ್ರಿಯೇಷನ್ ತಪ್ಪೆಯು (ಎಂದರೆ ಒಂದು ಖಾತೆಯಲ್ಲಿ ಆದ ಹೆಚ್ಚು ಖರ್ಚನ್ನು ಮತ್ತೊಂದು ಖಾತೆಯಲ್ಲಿ ಮಾಡಿಕೊಳ್ಳಬೇಕೆಂಬ ವಿಷಯದಲ್ಲಿ ತಯಾರಾಗತಕ್ಕ ತಪ್ಪೆ) ಒಂದು ಜನರಲ್ ಮಿಟಿಂಗಿನ ಮುಂದೆ ತರಲ್ಪಟ್ಟಲ್ಲಿ ಇದರಿಂದ ಕಂಡ ನಡವಳಿಕೆಯನ್ನು ಆಜರಿನ ತಕ್ಕದ್ದು —

(1) ಸಭಾಧ್ಯಕ್ಷರು ಸದರಿ ಜಮಾ ಮತ್ತು ಖರ್ಚಿನ ಗೋಷ್ವಾರೆಗಳ ಪ್ರತಿ ಒಂದು ಖಾತೆಯನ್ನು ಓದಿದೇಳ ಅವುಗಳಿಗೆ ಪ್ರಸ್ತಾಪಕರೂ ಅನುಮೋದಕರೂ ಇಲ್ಲದೇನೇ ಅವುಗಳನ್ನು ಮಿಟಿಂಗಿನಲ್ಲಿ ಹಂದು "ಈ ಖಾತೆಯು ಬಡ್ತಿಯಲ್ಲಿ ಅಥವಾ ರೀ ಅಪ್ರೋಪ್ರಿಯೇಷನ್ ತಪ್ಪೆಯಲ್ಲಿ ಒಂದು ಭಾಗವಾಗಿ ಇರಬೇಕೋ" ಎಂಬ ಪ್ರಶ್ನೆಯನ್ನು ಕೇಳಬೇಕು.

(2) ಯಾವ ಕೌನ್ಸಿಲರಾದರೂ ಸದರಿ ಖಾತೆಯನ್ನು ಕಮ್ಮಿಮಾಡಬೇಕೆಂದಾಗಲಿ, ಹೆಚ್ಚು ಮಾಡಬೇಕೆಂದಾಗಲಿ ಅಥವಾ ಖರ್ಚುಮಾಡಬೇಕೆಂದಾಗಲಿ ಸಲಹೆ ಕೊಟ್ಟು ಅದನ್ನು ಮತ್ತೊಬ್ಬರು ಅನುಮೋದಿಸಿದರೆ ಆಂಥಾ ಸಲಹೆಯು ತಿದ್ದುಪಾಟಾಗಿ ಎಣಿಸಲ್ಪಟ್ಟು ಮಿಟಿಂಗಿನಲ್ಲಿ ಇತ್ಯರ್ಥವಾಗಬೇಕಾದ ವಿಷಯವಾಗುತ್ತದೆ.

ಜನರಲ್ ಮಿಟಿಂಗಿನಲ್ಲಿ ಕೌನ್ಸಿಲರುಗಳು ಒಂದು ಕಮಿಟಿಯಾಗಿ ಏರ್ಪಡಿಸಿಕೊಳ್ಳಬಹುದು

27 ಮಿಟಿಂಗಿನ ಮುಂದಿರುವ ಒಂದು ವಿಷಯವನ್ನು ಪರ್ಯಾಲೋಚಿಸತಕ್ಕ ಬಗ್ಗೆ ಕೌನ್ಸಿಲರುಗಳು ತಾವಾಗಿಯೇ ಒಂದು ಕಮಿಟಿಯಾಗಿ ಏರ್ಪಡಿಸಿಕೊಂಡು ಸದರಿ ಮಿಟಿಂಗಿನಲ್ಲಿ ತೀರ್ಮಾನವನ್ನು ಮಾಡಬಹುದು. ಆಂಥಾ ಕಮಿಟಿಯಲ್ಲಿ ಒಂದು ಸಲಹೆಯನ್ನು ಅನುಮೋದಿಸಬೇಕಾದ ಅವಶ್ಯವಿರುವುದಿಲ್ಲ ಮತ್ತು ಒಬ್ಬ ಕೌನ್ಸಿಲರು ಇಲ್ಲಿ ಅನೇಕ ದಫಾ ಮಾತಾಡಬಹುದು. ಕಮಿಟಿಯವರು ತಮ್ಮ ತೀರ್ಮಾನವನ್ನು ಅದೇ ಮಿಟಿಂಗಿನಲ್ಲಾಗಲಿ ಅಥವಾ ಮುಂದಿನ ಮಿಟಿಂಗಿನಲ್ಲಾಗಲಿ ಮೆಂಬರುರಿ ಬಗ್ಗೆ ತಿಳಿಸಬಹುದು

ನಡವಳಿಕೆಗಳ ಕಚ್ಚಾ ಸಾರಾಂಶವನ್ನು ಒಂದು ಪೈಂಚಾದ ಪುಸ್ತಕದಲ್ಲಿ ಬರೆದುಕೊಳ್ಳಬೇಕು

28. ಮಿಟಿಂಗುಗಳಲ್ಲಿ ನಡೆಯುವ ನಡವಳಿಕೆಗಳ ಕಚ್ಚಾ ಸಾರಾಂಶಗಳನ್ನು ಆಜರಿ ನಡೆದ ಕಾಲದಲ್ಲಿ ಒಂದು ಫೈಂಡು ಮಾಡಲ್ಪಟ್ಟ ಪುಸ್ತಕದಲ್ಲಿ ಬರೆದುಕೊಳ್ಳಬೇಕು.

ಮಿಟಿಂಗು ಅಜರ್ ಮಾಡುವ ಅಂಥಾ ಕೆಲವು ಕಾಲಮಿತಿಗೆ ಬಿಡಿಸತಕ್ಕ ವಿಷಯದಲ್ಲಿ ಸಲಹೆ

29 ಒಂದು ಮಿಟಿಂಗನ್ನು ಅಜರ್ ಮಾಡತಕ್ಕ ಬಗ್ಗೆ ಅಥವಾ ಒಂದು ವಿಷಯದ ಪರ್ಯಾಲೋಚನೆಯನ್ನು ಸ್ವಲ್ಪಕಾಲದ ವರೆಗೆ ನಿಲ್ಲಿಸತಕ್ಕ ಬಗ್ಗೆ ಮಾಡಲ್ಪಡುವ ಸಲಹೆಯನ್ನು ಸದರಿ ಮಿಟಿಂಗಿನಲ್ಲಿ ತರಲ್ಪಟ್ಟ ಇತರ ಸಲಹೆಗಳಿಗಿಂತಲೂ ಮುಂಚಿತವಾಗಿ ಆಲೋಚನೆಗೆ ತೆಗೆದುಕೊಳ್ಳತಕ್ಕದ್ದು

ಮಿಟಿಂಗುಗಳು ಸಾಧಾರಣವಾಗಿ ಜನ ಸಾಮಾನ್ಯಕ್ಕೆ ಬಿಚ್ಚಿರಬೇಕು

30. ಎಲ್ಲಾ ಮಿಟಿಂಗುಗಳೂ ಜನಸಾಮಾನ್ಯಕ್ಕೆ ಬಿಚ್ಚಿರಬೇಕು. ಪರಂತು ಮ್ಯುನಿಸಿಪಲ್ ಕೌನ್ಸಿಲ್ ಸಭೆಯಲ್ಲಿ ವಿಚಾರಣೆಯಲ್ಲಿ ಅಥವಾ ಆಲೋಚನೆಯಲ್ಲಿ ಇಟ್ಟುಕೊಂಡಿರುವ ವಿಷಯವೆಷ್ಟು ಗೋಪ್ಯವಾಗಿ ಆಲೋಚಿಸತಕ್ಕದ್ದು ಅವಶ್ಯಕವೆಂದು ಸಭಾಧ್ಯಕ್ಷರಿಗೆ ತೋರಿದರೆ ಇತರ ಜನಗಳು ಮಿಟಿಂಗಿನಿಂದ ಹೊರಗೆ ಹೋಗಬೇಕೆಂದು ತಿಳಿಸಬಹುದು ಸಭಾಧ್ಯಕ್ಷರು ಸದರಿ ಮಿಟಿಂಗಿನ ನಡವಳಿಕೆಗಳಿಗೆ ಅಡಚಣೆಯನ್ನುಂಟುಮಾಡುವ ಯಾವ ಮನುಷ್ಯನನ್ನಾದರೂ ಯಾವ ಕಾಲದಲ್ಲಾಗಲಿ ಆಜ್ಞೆಗೆ ಕಳುಹಿಸಬಹುದು.

GPB—600—13-11-12

G.R.S. 28]

File No 1847 2

Serial No 3

Diary No of letter replied to 6035

Proceedings of the Government of His Highness the Maharaja of Mysore

GENERAL AND REVENUE SECRETARIAT
(Mb.)

Dated the 16. 4 1913

Date of issue 16.4.13

Signed by MrJGR

READ—

Letter No L 505 dated the 3rd April 1913 from the Deputy Commissioner, Bangalore District, submitting copies of resolutions of the Chickpet and Chamarajpet Municipal Councils declining to adopt the Rules in force in the City Municipalities of Bangalore and Mysore,

over regulating

SUBJECT

regulating the conduct of
business and proceedings
of the Municipal Councils' Inserting
Rule eighth alteration as to
the time and date of the meeting.

Order thereon, 8559 ml 1914-12 924 4.13

The Chamarajpet Municipal
Council proposes to hold their
monthly meetings on the last
Tuesday of each month at 4 PM
and that of Chamarajpet
on the last Saturday of each
month at 4 PM. The two
Municipal Councils proposes to
adopt the rules in force
in the City Municipalities of
Bangalore and proposes with-
the said alterations. Their
proposals are attended

WW 18/4/13

17/4/13 Dne 24

Dr. Rangacharya, Bangalore 24/4/14